# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2012

ಬೆಲೆ ರೂ.

॥ ಧಿಯೋ ಯೋನಃ ಪ್ರಚೋದಯಾತ್ ॥

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – ☎

ಸಂಪುಟ– ಸಂಚಿಕೆ– ಪುಟಗಳು–



**ಕವನ – 'ಬಾಲ್ಯ'**
ರಶ್ಮಿರಾವ್, ಉಳಿಯಾರು.ಮಜೂರು.
ಪುಟ – 3

**ತುಳುನಾಡಿನಲ್ಲಿ ಬ್ರಾಹ್ಮಣ್ಯ**
ಸಂಗ್ರಹ : ಸಿ.ಎಸ್.ರಾವ್.
ಪುಟ – 4





**ಭಗವತ್ಪಾದರ ಜೀವನ ನಮಗೆ ದಾರಿದೀಪ : ಡಾ ನಿರಂಜನ ಭಟ್**
ಸಾವಿತ್ರಿ ಮನೋಹರ್, ಕಾರ್ಕಳ
ಪುಟ – 6

**ವೈದ್ಯಕೀಯ ವೇದಿಕೆ– ಪ್ರಶ್ನೆ ಮತ್ತು ಉತ್ತರ**
ಡಾ। ವೈ. ಸುದರ್ಶನ ರಾವ್
ಪುಟ – 7


## ವೈ. ಅವನೀಂದ್ರನಾಥ್ ರಾವ್ ಅವರಿಗೆ ಬಿ.ಎಂ.ಶ್ರೀ ಪ್ರತಿಷ್ಠಾನದ ಪುರಸ್ಕಾರ




ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನವು ಹಿರಿಯ ಸಾಹಿತಿ ದಿ. ಸಮೇತನಹಳ್ಳಿ ರಾಮರಾಯ ಕೃತಿಗಳ ವಿಮರ್ಶೆಗೆ ನೀಡುವ ರಾಸ ಸಾಹಿತ್ಯ ದತ್ತಿ ನಿಧಿ ಬಹುಮಾನ ವನ್ನು ದೆಹಲಿಯ ಲೇಖಕ ವೈ ಅವನೀಂದ್ರನಾಥ ರಾವ್ ಅವರಿಗೆ ನೀಡಿದೆ. ಅವರು ಬರೆದ ಸಮೇತ ಹಳ್ಳಿಯವರ ಗಣೇಶ ನಾಟಕದಲ್ಲಿ ಭಾರತೀಯ ಸಂಸ್ಕೃತಿಯ ಅನಾವರಣ ಎಂಬ ವಿಮರ್ಶಾ ಪ್ರಬಂಧಕ್ಕೆ ಈ ಪುರಸ್ಕಾರ ಲಭಿಸಿದೆ.

ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಅವನೀಂದ್ರನಾಥ ಅವರು 2011ನೇ ಸಾಲಿನ ಪುರಸ್ಕಾರವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಹಾಗೂ ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರಿಂದ ಸ್ವೀಕರಿಸಿದರು.

ಪ್ರೊ। ಕೃಷ್ಣಯ್ಯ ಮಾತನಾಡಿ ಶಾಸನ ಪ್ರಿಯರಾಗಿದ್ದ ರಾಮರಾಯರ ಕೃತಿಗಳ ಅಧ್ಯಯನ ವಿಮರ್ಶಕರಿಗೆ ಒಂದು ಸವಾಲು ಎಂದು ತಿಳಿಸಿದರು. ಆರಂಭದಲ್ಲಿ ಹಿರಿಯ ಕವಿ.ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ ಅವರಿಂದ ತೀ.ನಂ.ಶ್ರೀ. ದತ್ತಿ ಉಪನ್ಯಾಸ ನಡೆಯಿತು. ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಡಿ. ಲಿಂಗಯ್ಯ, ಕಾರ್ಯದರ್ಶಿ, ಎಸ್.ವಿ. ಶ್ರೀನಿವಾಸ ರಾವ್ ಹಾಗೂ ಸಾಹಿತಿ ಡಿ.ಎಸ್. ನಾಗಭೂಷಣ ಉಪಸ್ಥಿತರಿದ್ದರು.

ಶ್ರೀ ಅವನೀಂದ್ರನಾಥ ಅವರು ದೆಹಲಿಯ ಕೇಂದ್ರ ಸಚಿವಾಲಯ ಗ್ರಂಥಾಲಯದ ಅಧಿಕಾರಿ. ಸಮಯ ಸಂದರ್ಭ ಲೇಖನಗಳ ಸಂಗ್ರಹ ಮತ್ತು ಎರಡು ಸಂಪಾದಿತ ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಶ್ರೀ ವೈ ಅವನೀಂದ್ರನಾಥ ರಾವ್ ಅವರು ಉಚ್ಚಿಲದ ದಿ। ವೈ ಸದಾಶಿವ ರಾವ್ ಮತ್ತು ಶ್ರೀಮತಿ ಸುಲೋಚನಾ ದಂಪತಿಗಳ ಪುತ್ರ ಹಾಗೂ ಬ್ರಹ್ಮಾವರದ ಡಾ। ವೈ. ರವೀಂದ್ರನಾಥ ರಾವ್‌ರವರ ಅನುಜ.

## ಕುಂಜಿಬೆಟ್ಟು, ಉಡುಪಿ : ಎಸ್.ಎಸ್.ಎಲ್.ಸಿ ಸಾಧಕರಿಗೆ ಸನ್ಮಾನ



ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ ರಾಜ್ಯದಲ್ಲಿ ದ್ವಿತೀಯ ಸ್ಥಾನಪಡೆದ ಕುಮಾರಿ ಪಲ್ಲವಿ ರಾವ್ ಇಡ್ಯಾ (621ಅಂಕಗಳು) ಇವರನ್ನು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಉಡುಪಿ ವತಿಯಿಂದ ಶ್ರೀ ಶಾರದಾ ಮಂಟಪದಲ್ಲಿ ತಾ 21–5–2012 ರಂದು ಜರುಗಿದ ಸಭೆಯಲ್ಲಿ ಫಲ, ಪುಷ್ಪ, ಹಾರ ನೀಡಿ ಸನ್ಮಾನಿಸಲಾಯಿತು. ಇವರು ಶ್ರೀ ಮಂಜುನಾಥ ರಾವ್ ಹಾಗೂ ಶ್ರೀಮತಿ ಭುವನಾ ದಂಪತಿಗಳ ಸುಪುತ್ರಿ.

ಸನ್ಮಾನ ಸಮಾರಂಭದಲ್ಲಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್, ಕಾರ್ಯದರ್ಶಿಯವರಾದ ಶ್ರೀ ಕೃಷ್ಣಮೂರ್ತಿರಾವ್ ಹಾಗೂ ಖಚಾಂಚಿಗಳಾದ ಡಾ। ವೈ.ಸುದರ್ಶನ ರಾವ್ ಉಪಸ್ಥಿತರಿದ್ದರು. ಅದೇ ಸಮಾರಂಭದಲ್ಲಿ ಕುಮಾರಿ ಪ್ರಗತಿ ಭಂಡಿ ಪೆರ್ಡೂರು (613 ಅಂಕಗಳು) ಇವರನ್ನು ಕೂಡಾ ಫಲ, ಪುಷ್ಪ ,ಹಾರ ನೀಡಿ ಸನ್ಮಾನಿಸಲಾಯಿತು.

ಇವರು ಶ್ರೀ ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿ ದಂಪತಿಗಳ ಸುಪುತ್ರಿ. ಸಮಾರಂಭದಲ್ಲಿ ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ। ವೈ ರವೀಂದ್ರನಾಥ ರಾವ್ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚಿಗೆ ವ್ಯಕ್ತ ಪಡಿಸಿ, ಮುಂದಿನ ದಿನಗಳಲ್ಲಿ ನಮ್ಮ ಸಮಾಜದ ಇನ್ನಷ್ಟು ವಿದ್ಯಾರ್ಥಿಗಳು ಇಂತಹ ಸಾಧನೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು. ಇವರಿಬ್ಬರೂ ಶ್ರೀ ಶಾರದಾ ಮಂಟಪದಲ್ಲಿ ಜರುಗಿದ ಎಸ್.ಎಸ್.ಎಲ್. ಸಿ ಪರೀಕ್ಷಾ ತರಬೇತಿ ಶಿಬಿರಕ್ಕೆ ಹಾಜರಾಗಿರುವುದು ನಮ್ಮೆಲ್ಲರಿಗೂ ಸಂತಸದ ವಿಷಯ ಎಂದರು.

ಸನ್ಮಾನ ಸಮಾರಂಭದಲ್ಲಿ ನಮ್ಮ ಸಂಘದ ಪದಾಧಿಕಾರಿಗಳು ಹಾಗೂ ಸಮಾಜಬಾಂಧವರು ಉಪಸ್ಥಿತರಿದ್ದರು. ಶಿಕ್ಷಣ ತರಬೇತಿ ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಪೆರ್ಡೂರು ಕಾರ್ಯಕ್ರಮವನ್ನು ನಿರ್ವಹಿಸಿ ಧನ್ಯವಾದ ನೀಡಿದರು.

**–ಪ್ರಭಾಕರ ಭಂಡಿ**

## ಶ್ರೀ ಮ.ನಾ.ಹೆಬ್ಬಾರರ ಕೃತಿ "ದಾರಿದೀಪ" ಬಿಡುಗಡೆ ಸಮಾರಂಭ



ನಿವೃತ್ತ ಉಪನ್ಯಾಸಕರೂ, ಯಕ್ಷಗಾನ–ತಾಳಮದ್ದಳೆ, ಹರಿಕಥಾ ಕಲಾವಿದರೂ ಆದ ಶ್ರೀ ಮ.ನಾ.ಹೆಬ್ಬಾರರು ಬರೆದ 350 ಪುಟಗಳ 'ದಾರಿದೀಪ' ಪುಸ್ತಕದ ಬಿಡುಗಡೆ ಸಮಾರಂಭವು ದಿನಾಂಕ 14–5–2012ರಂದು ಸಂಜೆ ಎಂ.ಜಿ.ಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಜರಗಿತು. ಉಡುಪಿ ಜಿಲ್ಲಾ ಕ.ಸಾ.ಪ.ದ ಮಾಜಿ ಅಧ್ಯಕ್ಷರಾದ ಶ್ರೀ ಮುದ್ರಾಡಿ ಅಂಬಾತನಯರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಧರ್ಮದರ್ಶಿಗಳಾದ ಡಾ। ನಿ.ಬೀ. ವಿಜಯ ಬಲ್ಲಾಳರವರು ಪುಸ್ತಕವನ್ನು ಬಿಡುಗಡೆ ಗೊಳಿಸಿದರು. ಆರಂಭದಲ್ಲಿ ವಿಧ್ಯಾರ್ಥಿನಿಯಿಂದ ಪ್ರಾರ್ಥನಾ ನಂತರ ಗ್ರಂಥದ ಸಂಪಾದಕರಾದ ಶ್ರೀ ತಲ್ಲೂರು ಶಿವರಾಮ ಶೆಟ್ಟಿಯವರು ಸ್ವಾಗತಿಸಿದರು. ಪುಸ್ತಕದ ಲೇಖಕರಾದ ಶ್ರೀ ಮಾ.ನಾ ಹೆಬ್ಬಾರರು 'ದಾರಿದೀಪ' ಪುಸ್ತಕದ ಸ್ಥೂಲ ಪರಿಚಯ ಮಾಡಿದರು. ಡಾ। ನಿ.ಬೀ. ವಿಜಯ ಬಲ್ಲಾಳರು ಪುಸ್ತಕವನ್ನು ಬಿಡುಗಡೆ ಗೊಳಿಸಿ, ಮನುಷ್ಯ ಸುಗಮವಾಗಿ ಜೀವನವನ್ನು ಸಾಗಿಸಲು ಅವಶ್ಯವಾದ ನೀತಿ ಸಂಹಿತೆ ಮತ್ತು ಮಾರ್ಗದರ್ಶನಗಳನ್ನು ಈ ಗ್ರಂಥವು ಸುಲಭ ಗ್ರಾಹ್ಯವಾದ ಸರಳ ಭಾಷೆಯಲ್ಲಿ ನಿರೂಪಿಸುತ್ತದೆ ಎಂದು ತಿಳಿಸಿ, ಇಂತಹ ನೀತಿ ಬೋಧಕವಾದ ಸಾಹಿತ್ಯವು ಸಮಾಜಕ್ಕೆ ಅವಶ್ಯವೆಂಬುದನ್ನು ವಿವರಿಸಿದರು. ಲಯನ್ಸ್ ಜಿಲ್ಲಾ ಗವರ್ನರ್ ಶ್ರೀ ಇಂದ್ರಾಳಿ ಜಯಕರ ಶೆಟ್ಟಿ, ಶ್ರೀಮತಿ ಶ್ವೇತಾ ಜಯಕರ ಶೆಟ್ಟಿ ಮತ್ತು ಲಯನೆಸ್ ಜಿಲ್ಲಾ ಸಂಯೋಜಕಿ ಶ್ರೀಮತಿ ಗಿರಿಜಾ ತಲ್ಲೂರು ಶಿವರಾಮ ಶೆಟ್ಟಿ ಇವರು ಅತಿಥಿಗಳಾಗಿದ್ದರು ಅಧ್ಯಕ್ಷತೆ ವಹಿಸಿದ್ದ ಕವಿ, ಸಾಹಿತಿ ಶ್ರೀ ಅಂಬಾತನಯ ಮುದ್ರಾಡಿಯವರು ಶ್ರೀ ಮಾ.ನಾ. ಹೆಬ್ಬಾರರ ಇತರ ಪದ್ಯ ಸಾಹಿತ್ಯ ಗಳಂತೆಯೇ ಈ ಗ್ರಂಥವು ಅತ್ಯಂತ ಉಪಯುಕ್ತವಾಗಿದ್ದು ಜನರು ಇದನ್ನು ಅವಶ್ಯವಾಗಿ ಅಭ್ಯಸಿಸ ಬೇಕೆಂದು ಹೇಳಿದರು. ಶ್ರೀ ಸುನೀಲ್ ಕುಮಾರ್‌ರವರು ಧನ್ಯವಾದವಿತ್ತರು. ಕಲಾವಿದ ಶ್ರೀ ಮುರಳಿ ಕಡೆಕಾರ್‌ರವರು ಕಾರ್ಯಕ್ರಮ ನಿರ್ವಹಿಸಿದರು. ಸಭಾ ಕಾರ್ಯಕ್ರಮದ ಬಳಿಕ ಯಕ್ಷಗಾನ ಕೇಂದ್ರದ ಶ್ರೀ ಬನ್ನಂಜೆ ಸಂಜೀವ ಸುವರ್ಣ ಮತ್ತು ಬಳಗ ದವರಿಂದ ನಳ–ಕಾರ್ಕೋಟಕ' ಎಂಬ ಯಕ್ಷಗಾನ ನೃತ್ಯ ರೂಪಕವು ಜರಗಿತು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

*ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್ ।*
*ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಯಾ ॥*

ಅನ್ನದಾನ ಶ್ರೇಷ್ಠವಾದುದು, ಅದಕ್ಕಿಂತಲೂ ಶ್ರೇಷ್ಠವಾದುದು ವಿದ್ಯಾದಾನ, ಅನ್ನದಿಂದಉಂಟಾಗುವ ತೃಪ್ತಿ ಕ್ಷಣಿಕ. ವಿದ್ಯೆಯಿಂದ ಲಭಿಸುವ ತೃಪ್ತಿ ಶಾಶ್ವತವಾದುದು.

★★★★

*ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ ।*
*ನ ಪಾಪ ಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತ ॥*

ಪುಣ್ಯದ ಫಲ ಎಲ್ಲರಿಗೂ ಬೇಕು. ಆದರೆ ಅದನ್ನು ಸಂಪಾದಿಸುವ ಕಷ್ಟವನ್ನು ಮಾತ್ರ ಎಲ್ಲರೂ ತೆಗೆದುಕೊಳ್ಳುವುದಿಲ್ಲ, ಪಾಪದ ಫಲ ಯಾರಿಗೂಬೇಡ. ಆದರೆ ಪಾಪ ಕಾರ್ಯ ಮಾಡುವುದನ್ನು ಮಾತ್ರ ಯಾರೂ ನಿಲ್ಲಿಸುವುದಿಲ್ಲ.

★★★★

*ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥ ಕೋಟಿಭಿಃ ।*
*ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ॥*

ಅನೇಕ ಕೋಟಿ ಗ್ರಂಥಗಳಿಂದ ಹೇಳಲ್ಪಟ್ಟ ಅರ್ಥವನ್ನು ಅರ್ಧಶ್ಲೋಕದಿಂದ ಹೇಳುತ್ತೇನೆ. ಹೇಗೆಂದರೆ; ಪರೋಪಕಾರವೇ ಪುಣ್ಯವು ಪರಾಪಕಾರವೇ ಪಾಪವೆಂದು ತಿಳಿಯಬೇಕು.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಆ ಆತ್ಮವು ಸ್ವಯಂಜ್ಯೋತಿಯೂ, ಅನನ್ಯವೂ, ಅವ್ಯಯವೂ,ದೋಷರಹಿತವೂ, ವಿಶ್ವದ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣವೂ ಆಗಿದೆ. ಅದರ ಹೆಸರೇ ಬ್ರಹ್ಮ. ಅನಂತರ ಅವನು ನೀರಿನಲ್ಲಿ ವಿಧಿವತ್ತಾಗಿ ಸ್ನಾನ ಮಾಡುತ್ತಿದ್ದನು. ಸ್ನಾನವಾದ ಮೇಲೆ ಮಡಿಯಾದ ಎರಡು ವಸ್ತ್ರಗಳನ್ನು (ಅಧರೀಯ ಮತ್ತು ಉತ್ತರಿಯ) ಧರಿಸುತ್ತಿದ್ದನು. ಬಳಿಕ ಸಂಧ್ಯಾವಂದನೆ ಕಲಾಪವನ್ನು ಮುಗಿಸಿ, ನಿತ್ಯ ಹವನವನ್ನು ಪೂರೈಸಿ, ಮೌನವಾಗಿ ಗಾಯತ್ರಿ ಜಪವನ್ನು ಮಾಡುತ್ತಿದ್ದನು. ಆಮೇಲೆ ಉದಯಿಸುವ ಸೂರ್ಯನ ಉಪಸ್ಥಾನವನ್ನು ಮಾಡಿ ತನ್ನ ಕಲೆಗಳಿಗೆ, ದೇವತೆಗಳಿಗೆ, ಋಷಿಗಳಿಗೆ ಮತ್ತು ಪಿತೃಗಳಿಗೆ ತರ್ಪಣವನ್ನು ಕೊಡುತ್ತಿದ್ದನು. ಇದಾದ ಅನಂತರ ಬ್ರಾಹ್ಮಣರನ್ನು ಅರ್ಚಿಸುತ್ತಿದ್ದನು, ಬ್ರಾಹ್ಮಣರಿಗೆ ಗೋದಾನವನ್ನು ಮಾಡುತ್ತಿದ್ದನು.ಆ ಗೋವುಗಳು ಹೇಗಿದ್ದವೆಂದರೆ ಅವುಗಳ ಕೊಂಬುಗಳಿಗೆ ಚಿನ್ನದ ಕವಚ, ಕತ್ತಿಗೆ ಮುತ್ತಿನ ಸರ, ಬೆಲೆಬಾಳುವ ಬಟ್ಟೆಗಳ ಹೊದಿಕೆಗಳಿಂದ ಕೂಡಿರುತ್ತಿದ್ದವು, ಅವುಗಳು ಧಾರಾಳವಾಗಿ ಹಾಲು ಕೊಡುತ್ತಿದ್ದವು; ಎಳೆಗರುಗಳೂ ಅವಕ್ಕಿದ್ದವು. ಗೋವುಗಳಿಗೆ, ದೇವತೆಗಳಿಗೆ, ವೃದ್ಧರಿಗೆ, ಗುರುಸಮಾನರಿಗೆ, ಭೂತಗಣಗಳಿಗೆ ನಮಸ್ಕರಿಸಿ, ಬಳಿಕ ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದನು. ಅನಂತರ ಆಜ್ಯ, ಕನ್ನಡಿ, ಗೋವು,ಎತ್ತು, ಬ್ರಾಹ್ಮಣ, ದೇವತೆಗಳ ವೀಕ್ಷಣೆಯಾಗುತ್ತಿತ್ತು. ಇಷ್ಟೆಲ್ಲಾ ಮುಗಿದ ಮೇಲೆ ಎಲ್ಲಾ ವರ್ಣಗಳ ಜನರಿಗೆ ಅವರವರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದನು. ಹೂವಿನ ಮಾಲೆ, ತಾಂಬೂಲ, ಅನುಲೇಪನಗಳನ್ನು ಕ್ರಮವಾಗಿ ವಿಪ್ರರಿಗೆ,ಸ್ನೇಹಿತರಿಗೆ ಪ್ರಜೆಗಳಿಗೆ, ಪತ್ನಿಯರಿಗೆ ಹಂಚಿ ಉಳಿದುದನ್ನು ತಾನು ಸ್ವೀಕರಿಸುತ್ತಿದ್ದನು. ಆಗ ಅವನ ಸಾರಥಿಯು ಸುಗ್ರೀವ ಮೊದಲಾದ ಕುದುರೆಗಳನ್ನು ಕಟ್ಟಿದ ರಥವನ್ನು ಕೃಷ್ಣನ ಮುಂದೆ ತಂದು ನಿಲ್ಲಿಸುತ್ತಿದ್ದನು. ಭಗವಂತನು ಸೂತನ ಕೈಹಿಡಿದುಕೊಂಡು ರಥವನ್ನೇರುತ್ತಿದ್ದನು. ಅವನ ಜೊತೆಯಲ್ಲಿ ಸಾತ್ಯಕಿ, ಉದ್ಧವರೂ ಇರುತ್ತಿದ್ದರು. ಶ್ರೀಕೃಷ್ಣನು ರಥವನ್ನೇರುವಾಗ ಪೂರ್ವಾಚಲವನ್ನೇರುವ ಸೂರ್ಯನಂತೆ ಕಾಣಿಸುತ್ತಿದ್ದನು. ರಥವು ಸುಧರ್ಮ ಎಂಬ ಸಭಾಭವನದ ಮುಂದೆ ಹೋಗಿ ನಿಲ್ಲುತ್ತಿತ್ತು. ಅಲ್ಲಿ ಯಾದವೇಂದ್ರನು ಯಾದವರ ಸಹಿತ ಸಭೆಯನ್ನು ಪ್ರವೇಶಿಸುತ್ತಿದ್ದನು. ಆ ಸಭೆಯಲ್ಲಿ ಕುಳಿತವರಿಗೆ ಹಸಿವು, ಬಾಯಾರಿಕೆ ಎಂಬ ಪ್ರಾಣಧರ್ಮವಾಗಲೀ, ಶೋಕಮೋಹ ವೆಂಬ ಮನೋಧರ್ಮವಾಗಲೀ, ಜರಾಮೃತ್ಯುವೆಂಬ ಶರೀರ ಧರ್ಮವಾಗಲಿ ಕಾಡುವುದಿಲ್ಲ. ಈ ಸಭೆಯಲ್ಲಿ ವಿದೂಷಕರ ಹಾಸ್ಯಗಳು,ನರ್ತಕ, ನರ್ತಕಿಯರ ನರ್ತನಗಳು, ನಟರನಾಟಕಗಳು, ಗಾಯಕರಗಾಯನಗಳು ನಡೆಯುತ್ತಿದ್ದವು. ಅಲ್ಲಿ ಬ್ರಹ್ಮವಾದಿಗಳಾದ ಬ್ರಾಹ್ಮಣರಿಂದ ಆಧ್ಯಾತ್ಮಿಕ ವಿಚಾರಗಳು ಪ್ರಸ್ತಾವಗೊಳ್ಳುತ್ತಿದ್ದವು. ಪ್ರವಚನಕಾರರಾದ ಕೆಲವರು ಪ್ರಾಚೀನಕಾಲದ ಪುಣ್ಯಶ್ಲೋಕರಾದ ರಾಜ ಮಹಾರಾಜರ ಕಥೆಗಳನ್ನು ಹೇಳುತ್ತಿದ್ದರು. ಹೀಗೆ ಶ್ರೀ ಕೃಷ್ಣನು ದಿನಗಳನ್ನು ಕಳೆಯುತ್ತಿದ್ದನು.

ಒಮ್ಮೆ ಶ್ರೀಕೃಷ್ಣನು ಸುಧರ್ಮದಲ್ಲಿ ಕುಳಿತ್ತಿದ್ದ ಸಮಯದಲ್ಲಿ ಒಬ್ಬ ಆಗಂತುಕ ಪುರುಷನು ಅಲ್ಲಿಗೆ ಬಂದನು. ಬಾಗಿಲು ಕಾಯುವವರು ಶ್ರೀಕೃಷ್ಣನ ಅನುಮತಿ ಪಡೆದು ಅವನನ್ನು ಒಳಗೆ ಕರೆದುಕೊಂಡು ಬಂದರು.ಪರಮಾತ್ಮನಿಗೆ ನಮಸ್ಕರಿಸಿದ ಆ ಮನುಷ್ಯನೆಂದನು,'' ದಿಗ್ವಿಜಯ ಸಮಯದಲ್ಲಿ ಜರಾಸಂಧನಿಗೆ ತಲೆಬಾಗದ ರಾಜರನ್ನು ಸೋಲಿಸಿ ಗಿರಿವ್ರಜದ ಸೆರೆಮನೆಯಲ್ಲಿ ಬಂಧಿಸಿಟ್ಟಿದ್ದಾನೆ. ಅವರ ಸಂಖ್ಯೆಯು ಇಪ್ಪತ್ತು ಸಾವಿರದಷ್ಟಿದೆ. ಅವರೆಲ್ಲಾ ನರಕಯಾತನೆ ಅನುಭವಿಸುತ್ತಿದ್ದಾರೆ. ಅವರಿಗೆ ನಿಮ್ಮನ್ನು ಬಿಟ್ಟರೆ ಬೇರೆ ರಕ್ಷಕರಿಲ್ಲ, ಆದುದರಿಂದ ಅವರು ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾರೆ. ಅವರ ಪ್ರಾರ್ಥನೆ ಹೀಗಿದೆ- ''ಪರಮಾತ್ಮನಾದ ಶ್ರೀಕೃಷ್ಣನೆ, ಕೃಪಾಸಾಗರನೆ, ಜಗನ್ನಾಥನೆ ದುಷ್ಟ ಜರಾಸಂಧ ನಮ್ಮನ್ನೆಲ್ಲಾ ಬಂಧಿಸಿಟ್ಟಿದ್ದಾನೆ. ನಿನಗೆ ಶರಣಾದವರನ್ನು ಎಲ್ಲ ರೀತಿಯ ಬಂಧನಗಳಿಂದ ಮುಕ್ತಗೊಳಿಸುವೆ. ಭಗವಂತ, ಜಗದೀಶ್ವರ, ನಾವು ನಿನಗೆ ಶರಣಾಗತರಾಗಿದ್ದೇವೆ. ಜರಾಸಂಧನೆಂಬ ಈಕರ್ಮಪಾಶವನ್ನು ಛೇದಿಸು. ನಿನ್ನ ಅಚಿಂತ್ಯಮಹಿಮೆಯನ್ನು ನಾವು ಬಲ್ಲೆವು. ನಾವೆಲ್ಲಾ ನಿನ್ನ ಭಕ್ತರು, ಆರಾಧಕರು , ಭಗವಂತ, ಈ ರಾಜರನ್ನು ಜರಾಸಂಧನ ಸೆರೆಯಿಂದ ಪಾರುಮಾಡಿರಿ.''

ಮಗಧದೇಶದಿಂದ ಬಂದಿರಾಜರ ದೂತನಾಗಿ ಬಂದ ಪುರುಷನ ಮಾತು ಮುಗಿಯುವಷ್ಟರಲ್ಲಿ ಆ ಸಭೆಗೆ ದೇವರ್ಷಿನಾರದರ ಆಗಮನವಾಯಿತು. ಶ್ರೀ ಕೃಷ್ಣಸಹಿತ ಎಲ್ಲರೂ ಎದ್ದು ನಿಂತು ಅವರಿಗೆ ವಂದಿಸಿದರು. ನಾರದರು ಆಸನಗ್ರಹಣ ಮಾಡಿದ ಮೇಲೆ ಅವರನ್ನು ಯಥಾವಿಧಿ ಅರ್ಚಿಸಿ ಶ್ರೀಕೃಷ್ಣನು ಅವರಿಗೆ ಪ್ರಶ್ನೆ ಮಾಡಿದನು,''ದೇವರ್ಷಿಗಳೆ, ನೀವು ತ್ರಿಲೋಕ ಸಂಚಾರಿಗಳು. ನಿಮಗೆ ತಿಳಿಯದ ವಿಷಯ ಯಾವಲೋಕದಲ್ಲೂ ಇಲ್ಲ, ನಮ್ಮ ಬಂಧುಗಳಾದ ಯುಧಿಷ್ಠಿರಾದಿ ಪಾಂಡವರು ಈಗ ಹೇಗಿರುವರು? ಏನು ಮಾಡುತ್ತಿರುವರು? ದಯೆಮಾಡಿ ತಿಳಿಸಿರಿ,'' ಅದಕ್ಕೆ ನಾರದರೆಂದರು, ''ಪರಮೇಶ, ನೀನು ಸರ್ವಜ್ಞ, ನಿನಗೆ ಸೃಷ್ಟಿಯಲ್ಲಿ ತಿಳಿಯದ್ದೇನಿದೆ? ಆದರೂ ಮನುಷ್ಯರೂಪದಲ್ಲಿ ಮನುಷ್ಯರಂತೆ ಅಜ್ಞಾನವನ್ನು ನಟಿಸುತ್ತಿರುವೆ. ನಿನ್ನ ಲೀಲೆಗಳನ್ನು ನಾನು ಬಲ್ಲೆ. ಭಗವಂತ, ನಿನ್ನ ಸೋದರ ಭಾವನಾದ ಯುಧಿಷ್ಠಿರನು ರಾಜಸೂಯಯಾಗದ ಮೂಲಕ ನಿನ್ನನ್ನು ಆರಾಧಿಸಿ ಬ್ರಹ್ಮಲೋಕದ ಆನಂದವನ್ನು ಅನುಭವಿಸಲು ಬಯಸಿದ್ದಾನೆ. ಅದನ್ನು ನೀನು ಅನುಮೋದಿಸು. ಆ ಶ್ರೇಷ್ಠಯಾಗದ ಕಾಲದಲ್ಲಿ ದೇವತೆಗಳೂ, ರಾಜರೂ ನಿನ್ನ ದರ್ಶನ ಪಡೆಯಲು ಉತ್ಸುಕರಾಗಿದ್ದಾರೆ. ನಿನ್ನ ನಾಮಶ್ರವಣ ಕೀರ್ತನೆಗಳಿಂದ ಎಂತಹ ಕೆಳದರ್ಜೆಯ ಮನುಷ್ಯನೂ ಪವಿತ್ರಗೊಳ್ಳುತ್ತಾನೆ. ಅಂತಿರುವಾಗ ನಿನ್ನ ದರ್ಶನ, ಸ್ಪರ್ಶಗಳ ಭಾಗ್ಯ ಪಡೆದವರ ವಿಷಯವನ್ನು ಹೇಳಲಿಕ್ಕೇನಿದೆ? ನೀನು ಬ್ರಹ್ಮಮಯನಲ್ಲವೇ ದೇವ? ನಿನ್ನ ಚರಣಜಲವು ಸ್ವರ್ಗದಲ್ಲಿ ಮಂದಾಕಿನಿ ಎಂದೂ, ಪಾತಾಳದಲ್ಲಿ ಭೋಗವತಿ ಎಂದೂ, ಭೂಮಿಯ ಮೇಲೆ ಗಂಗೆಯೆಂದೂ ಪ್ರಸಿದ್ಧವಾಗಿ ಎಲ್ಲವನ್ನೂ ಪಾವನಗೊಳಿಸುತ್ತಿದೆ.''

ಆದರೆ ಈ ವಿಚಾರವನ್ನು ಅಲ್ಲಿದ್ದ ಯಾದವ ವೀರರು ಯಾರೂ ಒಪ್ಪಲಿಲ್ಲ. ಅವರಿಗೆ ಮೊದಲು ಶತ್ರುವನ್ನು ಗೆಲ್ಲಬೇಕೆಂಬ ಬಯಕೆ ಇತ್ತು. ಆದರೆ ಶ್ರೀ ಕೃಷ್ಣನು ಮುಗುಳು ನಗುತ್ತಾ ಉದ್ಧವನನ್ನು ಕೇಳಿದನು, ''ಉದ್ಧವ, ನೀನು ನಮ್ಮ ಶ್ರೇಷ್ಠ ಕಣ್ಣು ಮಿತ್ರ. ನೀನು ಮಂತ್ರಣ ತತ್ತ್ವವನ್ನು ಚೆನ್ನಾಗಿ ಬಲ್ಲವನು. ನಾವೇನು ಮಾಡಬೇಕೆಂಬುದನ್ನು ನೀನು ಹೇಳು, ಅದರಂತೆ ನಾವು ನಡೆದು ಕೊಳ್ಳುತ್ತೇವೆ.''

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**
**''ಕೊಂಡಿ ಕಳಚುತ್ತಿದೆ''**
**(ಆಯ್ದ ಕವನಗಳ ಸಂಕಲನ)**
*ಲೇಖಕರು :* ಮಾರ್ಪಳ್ಳಿ ಆರ್.ಮಂಜುನಾಥ್
*ಮುದ್ರಕರು :* ಜೋಯ್ಸ್ ಬುಕ್ ಹೌಸ್ ಮತ್ತು ಪ್ರಿಂಟರ್ಸ್, ಶಿವಮೊಗ್ಗ

''ಕೊಂಡಿ ಕಳಚುತ್ತಿದೆ'' ಈ ಕೃತಿ ಲೇಖಕರಾದ ಮಾರ್ಪಳ್ಳಿ ಆರ್.ಮಂಜುನಾಥ ಇವರ ಕವಿನುಡಿ ''ನನ್ನ ಹತ್ತೊಂಭತ್ತನೆಯ ಕೃತಿ 'ಕೊಂಡಿ ಕಳಚುತ್ತಿದೆ' ಆಯ್ದ ಕವನಗಳ ಸಂಕಲನ. ಮಕ್ಕಳ ಸಾಹಿತ್ಯದಿಂದ ಪ್ರೌಢ ಸಾಹಿತ್ಯದ ಪ್ರಕಾರದ ಕಡೆ ಇರಿಸಿದ ನಾಲ್ಕನೇ ಹೆಜ್ಜೆ.

ನಾನು ಕಂಡುಂಡ, ನೋಡಿದ, ಅನುಭವಿಸಿದ ಸುತ್ತಮುತ್ತ ನಡೆಯುವ ಪ್ರಸ್ತುತ ವಿಷಯವನ್ನು ನನಗನಿಸಿದ ರೀತಿಯಲ್ಲಿಯೇ ನೋವು-ನಲಿವುಗಳನ್ನು ಹಂಚಿಕೊಂಡ ಕವನಗಳು ಇದಾಗಿದೆ.

ಮಿಥ್ಯಕ್ಕಿಂತ ಸತ್ಯಕ್ಕೆ,ಸುಳ್ಳಿಗಿಂತ ವಾಸ್ತವಾಂಶಕ್ಕೆ, ಇದ್ದಂತೆ ಇದ್ದ ಹಾಗೆಯೇ ಹೇಳುವ ಪ್ರಾಮಾಣಿಕ ಪ್ರಯತ್ನ ನನ್ನ ಈ ಕವನದಲ್ಲಿದೆ. ಕೆಲವೊಮ್ಮೆ ಪ್ರಾಸಕ್ಕೆ ಜೋತು ಬಿದ್ದಂತೆ ಅನಿಸಿದರೂ. ಆ ಪ್ರಾಸದ ಅಗತ್ಯಕ್ಕನುಗುಣವಾಗಿ ಭಾವಕ್ಕೆ ತಕ್ಕಂತೆ ಕವನವನ್ನು ರಚಿಸಿದ್ದೇನೆ. ಈ ಸಂಕಲನದಲ್ಲಿ ಒಂದೇ ವಿಷಯಕ್ಕೆ ಹೋಲುವ ಎರಡೆರಡು ಕವನಗಳಿದ್ದರೂ ಅದರಲ್ಲಿನ ಭಾವ, ಅರ್ಥ ಬೇರೆ ಬೇರೆ. ಬೇರೆ ಬೇರೆ ಕಾಲದಲ್ಲಿ ಬರೆದ ಕವನಗಳಾಗಿವೆ''.

ಈ ಕೃತಿಯಲ್ಲಿ ಶುಭನುಡಿದ ವಿ.ಪೊನ್ನುರಾಜ್, ಭಾ.ಆ.ಸೇ, ಆಯುಕ್ತರು, ಬೆಂಗಳೂರು ಇವರು ಹೀಗೆ ಹೇಳುತ್ತಾರೆ ''ಶ್ರೀ ಮಾರ್ಪಳ್ಳಿ ಆರ್. ಮಂಜುನಾಥರವರಲ್ಲಿ ಅಂತರ್ಗತವಾಗಿರುವ ಕಾವ್ಯ ಶೀಲತೆಯು ಮೆಚ್ಚುವಂತದ್ದು. ಪದ-ಪದಗಳನ್ನು ಹೆಣೆದು ಕವನವಾಗಿಸಿರುವ, ಅದಕ್ಕೆ ಬದುಕಿನ ಅನುಭಾವವನ್ನು ಬೆರೆಸಿ ಕಾವ್ಯವಾಗಿಸಿರುವ ಪರಿ ಪ್ರಶಂಸನೀಯ. ಕನ್ನಡ ಕಾವ್ಯ ಲೋಕವೆಂಬ 'ದೊಡ್ಡ ಆಲದ ಮರ'ದಲ್ಲಿ ಹೊಸದಾಗಿ ಚಿಗುರೊಡೆದ ಎಲೆಯೇ 'ಕೊಂಡಿ ಕಳಚುತ್ತಿದೆ' ಆಯ್ದ ಕವನ ಸಂಕಲನವಾಗಿದೆ.

ಲೇಖಕರು ತಮ್ಮ ಜೀವನಾನುಭವದ ಹೂರಣವನ್ನು ಈ ಕವನ ಸಂಕಲನದ ಮೂಲಕ ಬಿಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಇದರ ದ್ಯೋತಕವಾಗಿ 'ನಮ್ಮ ಯಾತ್ರೆ ಎಂದು?' ಕವನವು ಜೀವನದ ಕ್ಷಣಿಕತೆಯ ಕನ್ನಡಿಯಾದರೆ, 'ಅಂತೂ ನಿನ್ನ ಹೊಟ್ಟೆಯಾದರೂ ತುಂಬಿತ್ತಲ್ಲ' ಕವನವು ಬದುಕಿನ ಸಿಹಿ ಕಹಿ ಸಂಘರ್ಷಗಳ ಮತ್ತು ಕುಹಕತೆಯ ಪ್ರತೀಕವಾಗಿ ನಿಲ್ಲುತ್ತದೆ. ಎದೆಯಲ್ಲಿ ಹುದುಗಿಹೋಗಿರುವ ಬದುಕಿನ ಕ್ರಿಯಾ ಶೀಲತೆಗಳ ಅಂತಃಸತ್ವವನ್ನು ಬಡಿದೆಬ್ಬಿಸುವ ಪದಗಳ ಪುಂಜವೇ ಸಾಧಿಸಲು ಛಲ ಕವನವಾಗಿದೆ''.

ಈ ಕವನ ಸಂಕಲನದಲ್ಲಿ 50 ಕವನಗಳಿವೆ. 'ಮರೆತು ಬಿಡೋಣಾ ಕಹಿ ನೆನಪು' ಎಂಬ ಕವನದಲ್ಲಿ ಕವಿಯ ಆಶಯ ಹೀಗಿದೆ-

ನಿತ್ಯವು ಹುಟ್ಟಿ ಬರಲಿ ನವೋಲ್ಲಾಸ
ಹೊಮ್ಮಲಿ ನಮ್ಮಲಿ ಹೊಸತನ
ಎಲ್ಲಾ ಮರೆತು ಎಲ್ಲೆಡೆ ಕಲೆತು
ನಮ್ಮ ಬಾಳಾಗಲೀ ನವನವೀನ.

– ವೈ. ಮೋಹನ ರಾವ್.

ಶ್ರೀಶಾರದಾ ವೇದಿಕೆಯ ಮಹಾ ಪೋಷಕರು : ಅಂಬಲಪಾಡಿ ಕೃಷ್ಣ ರಾವ್, ಡಾ. ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012

**(ಸಮಾವೇಷದ ಕುರಿತು ಶ್ರೀ ಮನಾ ಹೆಬ್ಬಾರರು ರಚಿಸಿ ತಾ.12-5-2012ರಂದು ಸಂಜೆ ವೇದಿಕೆಯಲ್ಲಿ ವಾಚಿಸಿದ ಕವನವಿದು)**

### ಭಾಮಿನಿ ಷಟ್ಪದಿ

ಪರಮ ಪಾವನೆ ತುಂಗೆ ಪರಿದಿಹ। ನಿರುಪಮದ ಕ್ಷೇತ್ರದಲಿ ನೆಲೆಸುತ ।
ನಿರತ ಭಕ್ತರ ಪೊರೆವ ಶ್ರೀ ಶಾರದೆಗೆ ನಮಿಸುತಲಿ ॥
ವರ ಮುನಿಪ ಶ್ರೀ ಭಾರತೀ ತೀ-।
ರ್ಥರ ಚರಣ ಕಮಲಕ್ಕೆ ಮಣಿಯುತ ।
ಹರಕೆ ಬೇಡುವೆ ಸ್ಥಾನಿಕರನುದ್ಧರಿಸಿರೆಂದೆನುತ ॥

ಕಡಲ ತೀರದ ಉಡುಪ ಪುರದಲಿ।
ಮೃಡನ ಭಕುತರು ಸಡಗರದಿ ತಾವ್ ।
ಬಿಡದೆ ಸೇರುತ ಜಡಜ ಸಂಭವ ಮಡದಿ ನಗರದಲಿ॥
ಕಡು ಹರುಷದಲಿ ದೃಢದ ಮನದಿಂ -।
ದೊಡನೆ ಭಾರತದೆಡೆಯ ವಿಪ್ರರ ।
ಗಡಣ ಬರಿಸುತ ನಡೆಸುವೀ ಸಭೆಗೊಡನೆ ಮಂಗಲವ ॥

ನೀಡಬೇಕೆಂದಭವನೊಳು ನಾ ।
ಬೇಡುವೆನು ಭಯಭಕ್ತಿಯಿಂದಲಿ ।
ಗಾಢದಿಂ ಸ್ಥಾನಿಕರ ಬಳಗಕೆ ಶುಭವ ಕೋರುತಲಿ ॥
ಕೂಡಿರುವ ಬಂಧುಗಳ ಗಡಣಕೆ ।
ಕಾಡಬಹುದಾದಖಿಳ ಕಷ್ಟವ ।
ಓಡಿಸೆನುತಲಿ ಪ್ರಾರ್ಥಿಪೆನು ಶ್ರೀ ಶಾರದಾಂಬೆಯನು॥

ಬಂಧು ಮಿತ್ರರ ಬಳಗವೆಲ್ಲವು।
ಒಂದೆ ಮನದಲಿ ಕಲೆತು ತವ ಸಂ-।
ಬಂಧ ಸುಕ್ಷೇಮಾದಿಗಳ ಸಂಭಾಷಣೆಯ ನಡೆಸಿ ॥
ಮಂದ ಬುದ್ಧಿಯ ತೊರೆಯುತೆಲ್ಲರು ।
ಒಂದು ಎಂಬಭಿಮಾನ ತಾಳುತ ।
ಇಂದಿರಾಧವನನಂಘ್ರಿ ನೆನೆಯುತ ಬಾಳ್ವ ಸಂತಸದಿ ॥

-ಮ.ನಾ.ಹೆಬ್ಬಾರ, ಬೆಳ್ವೆ

-Sagar. P
Jnana Ganga Central School, Bellare, D.K.

## ಬಾಲ್ಯ

ಅಲ್ಲಿ ಹುಡುಕಿದೆ, ಇಲ್ಲೂ ಹುಡುಕಿದೆ
ಇಲ್ಲ, ಅದಿಲ್ಲ, ಇಲ್ಲವೇ ಇಲ್ಲ
ಎಲ್ಲಿ ಕಳೆದುಹೋಯಿತು?
ಆ ಸುಂದರ ಸ್ವಪ್ನ ಸದೃಶ ಬಾಲ್ಯ
ತಾಯ ಗರ್ಭದ ಬೆಚ್ಚನೆಯ ಹೊದಿಕೆ ಕಳೆದು
ಭೂಮಿಯ ಮೇಲೆ ಕಣ್ಣು ಬಿಟ್ಟದ್ದಷ್ಟೆ
ನಿಧಾನವಾಗಿ ಕವುಚಿ ಬೀಳುತ್ತಾ ಅಂಬೆಗಾಲಿಕ್ಕುತ್ತಾ
ಮನೆ ತುಂಬಾ ಓಡಾಡಿ.........


ಇದ್ದಬಿದ್ದ ವಸ್ತುಗಳ ಎಳೆದು ಹಾಕಿದ್ದೇ
ಎಳೆದೊಯ್ದು ಬಿಟ್ಟರಲ್ಲ ಅಂಗನವಾಡಿಗೆ
ಅಲ್ಲೊಂದು ಬೇರೆಯದೇ ಲೋಕ.....
ಪುಟ್ಟ ಪುಟ್ಟ ಗೆಳೆಯರ ಜೊತೆಗೆ ಚಿಕ್ಕ ಚಿಕ್ಕ
ಆಟ,ಪಾಠ, ಪೆಟ್ಟು, ನೋವು,ಅಳು
ಆನಂತರದ್ದು ಓದು,ಓದು,ಓದು.
ನಡು ನಡುವೆ ಹೊಸ ಹೊಸ ಗೆಳೆಯರು.......

ಮುನಿಸು,ಸಿಟ್ಟು,ಮತ್ಸರ,ಆನಂದ ಖುಷಿ
ಬೈಗುಳ,ದು:ಖ,ಗೌರವ,ಅಸಹನೆ
ಎಲ್ಲಾ..ಹೊಕ್ಕಿದ್ದವು ಮನದೊಳಗೆ.....
ಅತ್ತ ಲಗೋರಿ ಆಡಿ, ಇತ್ತ ಕುಂಟಬಿಲ್ಲೆ ಆಡಿ
ಪುಟ್ಟ ಗೊಂಬೆ ಹಿಡಿದು,ಅದಕೆ ಹೂಗಳ ಮುಡಿಸಿ
ಚಿಕ್ಕ ಮನೆ ಕಟ್ಟಿ ಮನೆ ಆಟ ಆಡಿ
ದಿನಗಳೆಲ್ಲ ಕಳೆದೇ ಹೋದುವಲ್ಲ.......

ಈಗ ಆಡುವುನೆಂದರೂ ನಾಚಿಕೆ. ಮುಜುಗರ
ಎಲ್ಲಾ ಓಡೋಡಿ ಬರುತ್ತವೆ....
ಎಲ್ಲಿದ್ದವೋ ಅವೆಲ್ಲ ಅಂದು.

-ರಶ್ಮಿರಾವ್, ಉಳಿಯಾರು.ಮಜೂರು.

## ಡಿ.ಸಿ.ಎ. ಅತ್ಯುನ್ನತ ಹುದ್ದೆಗೆ ಪದೋನ್ನತಿ



ಹೊಸಬೆಟ್ಟು ಮೆಸ್ಕಾಂನಲ್ಲಿ ಲೆಕ್ಕಾಧಿಕಾರಿಯಾಗಿ (ಆಡಳಿತ, ಕಾರ್ಪೊರೇಟ್ ಕಛೇರಿ, ಮಂಗಳೂರು) ಕಾರ್ಯನಿರ್ವಹಿಸುತ್ತಿದ್ದ ಹೊಸಬೆಟ್ಟು ರೀಜೆಂಟ ಪಾರ್ಕ್‌ನಿವಾಸಿ ಕಾಪು ಶ್ರೀಯುತ ಮಾಧವ್‌ರಾವ್ ಇವರು ಹುದ್ದೆಗೆ ಪದೋನ್ನತಿಗೊಂಡು ತಾ.21-5-2012ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ. ಇವರ ಪ್ರಾಮಾಣಿಕತೆ, ಕಾರ್ಯವೈಖರಿ, ವಿವಿಧ ಶಾಖೆಗಳಲ್ಲಿ ಹೊಂದಿದ ಅಪಾರ ಅನುಭವಗಳನ್ನು ಗಮನಿಸಿದ ಕರ್ನಾಟಕ ವಿದ್ಯುತ್ ಪ್ರಸಾರ ನಿಗಮವು ಇವರನ್ನು ಬೇರೆಡೆ ವರ್ಗಾವಣೆ ಮಾಡದೆ, ಇವರು ಈಗ ಕೆಲಸ ನಿರ್ವಹಿಸುತ್ತಿದ್ದಲ್ಲಿಯೇ ಹುದ್ದೆಯನ್ನು ಉನ್ನತೀಕರಿಸಿ ಭಡ್ತಿ ನೀಡಿರುವುದು ಹೆಮ್ಮೆಯ ವಿಷಯವಾಗಿದೆ. ಶ್ರೀಯುತರು ಕಾಪು ದಿ। ಸುಬ್ಬಣ್ಣಯ್ಯ ಹಾಗೂ ದಿ। ಶಾರದಮ್ಮನವರ ಸುಪುತ್ರರು. ಇವರ ಸಾಧನೆಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.

### ಕಡಬದ ಶ್ರೀ ಶ್ರೀ ಕಂಠಸ್ವಾಮಿ, ಶ್ರೀ ಮಹಾಗಣಪತಿ ದೇವಸ್ಥಾನದ

## ಆಡಳಿತ ಸಮಿತಿ ಅಧ್ಯಕ್ಷರಾಗಿ ಕಡಬ ಗೋಪಾಲ ರಾವ್ ಆಯ್ಕೆ

ಐತಿಹಾಸಿಕವಾಗಿ ಪ್ರಸಿದ್ಧಿ ಹೊಂದಿದ ಕಡಬದ ಶ್ರೀ ಶ್ರೀ ಕಂಠಸ್ವಾಮಿ, ಶ್ರೀ ಮಹಾಗಣಪತಿ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷರಾಗಿ ಕಡಬ ಗೋಪಾಲರಾವ್ ನಾಲ್ಕನೆ ಬಾರಿಗೆ ಆಯ್ಕೆ ಹೊಂದಿರುತ್ತಾರೆ. ಶ್ರೀಯುತರು ಶಿಕ್ಷಣಕ್ಷೇತ್ರದಲ್ಲಿ ರಾಜ್ಯ ಪ್ರಶಸ್ತಿಯನ್ನೂ, ಧಾರ್ಮಿಕ ಸೇವೆಗೆ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುತ್ತಾರೆ.

ಭಗವತ್ಪಾದ ಆದಿ ಜಗದ್ಗುರು ಶ್ರಿ ಶ್ರೀ ಶಂಕರಾಚಾರ್ಯರು ಸುಮಾರು 1200 ವರ್ಷಗಳ ಹಿಂದೆ ಸುಬ್ರಹ್ಮಣ್ಯಕ್ಕೆ ಬಂದವರು ಕೊಲ್ಲೂರಿಗೆ ಹೋಗುವ ಸಂದರ್ಭ ಕಡಬದಲ್ಲಿ ಕೆಲಕಾಲವಿದ್ದು ಶ್ರೀ ಶ್ರೀ ಕಂಠಸ್ವಾಮಿಯನ್ನು ಆರಾಧಿಸಿದ್ದರೆಂದು ಶಂಕರ ವಿಜಯ ಗ್ರಂಥದಿಂದ ತಿಳಿದು ಬರುತ್ತದೆ. ಅಲ್ಲಿಂದ ಇತ್ತೀಚಿಗಿನ ವರೆಗೆ ಸ್ಥಾನಿಕ ಬ್ರಾಹ್ಮಣ ವರ್ಗಕ್ಕೆ ಸೇರಿದ ಕುಂಭಾಟ್ ಮನೆತನದವರೇ ಆಡಳಿತ ಹಾಗೂ ಪೂಜೆಯನ್ನು ನೆರವೇರಿಸಿ ಕೊಂಡು ಬಂದಿದ್ದರು.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಕೋಟ ಬ್ರಾಹ್ಮಣರಲ್ಲಿ ಕಂಡುಬರುವ ಅಷ್ಟಗೃಹ ಭೇದಗಳಲ್ಲಿ ಕೆಲವು ಹೇಗೆ ಬಳಕೆಗೆ ಬಂದುವೆಂಬುದನ್ನು ಹೇಳುವುದು ಕಷ್ಟಸಾಧ್ಯವಾಗಿದೆ. ಹೊಳ್ಳ, ಮಯ್ಯ, ಬಾಸರಿ,ನಾವಡ, ಎಂಬವುಗಳು ಏನನ್ನು ನಿರ್ದೇಶಿಸಬಹುದು? ಏನಾದರೊಂದು ಅರ್ಥವಿರಬೇಕಷ್ಟೆ ತುಂಗ ಶ್ರೇಷ್ಠನಾದವನು; ಹಿಂದೆ ಮುಂದೆಯನ್ನು ಪೋಷಿಸುವವನು, ಕಾರಂತ ಕಾರ್ಯವಂತ; ಹೆಬ್ಬಾರ-ಹಿರಿಯ ಬ್ರಾಹ್ಮಣ ಎಂಬ ಅರ್ಥಗಳನ್ನು ಸ್ವೀಕರಿಸೋಣವೇ ಅವರಲ್ಲಿ ಇನ್ನೂ ಕೆಲವು ಹೆಸರುಗಳಿವೆ.-ಮುಂಜ, ಉರಾಳ, ಹೇರಾಳ, ಇತ್ಯಾದಿ. ಇವುಗಳು ಅನ್ವರ್ಥ ನಾಮಗಳೆ? ತುಳು ಬ್ರಾಹ್ಮಣರಲ್ಲಿ ಬರುವ ಉಡುಪ,ಹೆಬ್ಬಾರ,ಐತಾಳ, ಬಲ್ಲಾಳ, ತಂತ್ರಿ, ಭಟ್ಟ,ಜನ್ನಿ, ಮಧ್ಯಸ್ಥ-ಹೆಸರುಗಳು ಮೂಲ ಕುಲನಾಮಗಳಾಗಿ ಪರಿಗಣಿಸಲ್ಪಡುವುದಿಲ್ಲ; ಕಾರಣವೇನೆಂದರೆ ಇವು ಅವರು ಮಾಡುವ ಕರ್ಮದಿಂದಾಗಲೀ ಅಧಿಕಾರದಿಂದಾಗಲೀ ಬಂದ ಹೆಸರುಗಳು.

ತೌಳವ ಬ್ರಾಹ್ಮಣರನ್ನು ಇನ್ನೊಂದು ರೀತಿಯಲ್ಲಿ ವರ್ಗೀಕರಿಸಬಹುದು. ಈ ರೀತಿಯಲ್ಲಿ ವರ್ಗೀಕರಿಸಬಹುದು. ಈವರ್ಗೀಕರಣದ ಕುರಿತು ದೀರ್ಘ ವಿವರ ಕೊಡಲು ಇಚ್ಛಿಸುವುದಿಲ್ಲ. ಎ)ಅಹಿಚ್ಛತ್ರದಿಂದ ಬಂದರೆಂದು ಹೆಸರಾದ ಬ್ರಾಹ್ಮಣರ ವಿಭಾಗಗಳನ್ನು ಈ ಕೆಳಗಿನಂತೆ ಅವರು ಹೊಂದಿರುವ ಅಧಿಕಾರ ಹಾಗೂ ಸಮಾಜದಲ್ಲಿ ಅವರಿಗಿದ್ದ ಸ್ಥಾನವನ್ನು ಹೊಂದಿಕೊಂಡು ಮಾಡಬಹುದು.

1) ಭಟ್ಟ ಜನರು (40)ಮೂನ್ನೂರಾಯ. ಅರಿನಾಯ, ಕೋಟಿನ್ನಾಯ, ಪಿಜತ್ತಾಯ, ಪಾತುರಾಯ, ಇಂದ್ರವಳ್ಳಿತಾಯ, ಕೆಳತಾಯ, ಮೂಡಪಡಿತಾಯ,ಬಗೆತ್ತಾಯ, ಶಬರಾಯ, ಆತ್ರಾಡಿತಾಯ ಇತ್ಯಾದಿ.

2) ಸ್ಮಾರ್ತಜನರು (14) ನೂಜಿತಾಯ, ಕಿದೆಕಿಳನಾಯ, ನಾರಳತಾಯ, ತಾಳತಾಯ, ಅಯ್ಯಪ್ಪನಾಯ, ಮಣ್ಣಗಳತಾಯ, ಅಲೆವೂರಾಯ, ಬ್ರಹ್ಮಕಾರಂತ, ಕಲ್ಲೂರಾಯ, ಉಡುಪ, ಬೈಪಾಡಿತಾಯ, ಮೂಡ ಪಾಡಿ ತಾಯ.

3) ಅಗ್ನಿಹೋತ್ರಿಗಳು, (24) ಸೀಮಂತೂರಾಯ, ಮುಚ್ಚಂತ್ತಾಯ, ಮುನ್ನೂರಾಯ, ಅಲೆವೂರಾಯ, ಕೊಡಂಚ, ಮುಂಚಿತಾಯ, ಸರಳಾಯ, ಮಡಿಪುಳಿತಾಯ, ಕುಂಜತ್ತಾಯ, ಸಗರಿತ್ತಾಯ, ಇತ್ಯಾದಿ.

4) ತಂತ್ರಿಗಳು (4) ನೇತ್ರತ್ತಾಯ, ಉಚ್ಚಿಲತಾಯ, ಪುತ್ರಾಯ, ಪಾಂಗಣ್ಣಾಯ

5) ಸಭಾಪತಿಗಳು (2) ಶಬರೂರಾಯ, ತಬರೂರಾಯ.

6) ಪಂಡಿತರು (2) ಕಲ್ಲೂರಾಯ, ಉಪ್ಪರಣ್ಣಾಯ

7) ಬಲ್ಲಾಳರು (4) ತಲೆಪ್ಪಾಡಿ, ಮುಂಜನೋಡಿ, ನಿಡಂಬು, ಮೂಡಿಲ್ಲ

8) ಗ್ರಾಮಣಿಗಳು (24) ಪಾತೂರಾಯ, ಶುಳ್ಳಣ್ಣಾಯ, ಕಿದೆಕಿದೆನಾಯ, ಕೋಟಿಂಜತ್ತಾಯ, ಮೂಡಿಂತಿಲ್ಲಾಯ, ನಡುವಂತಿಲ್ಲಾಯ, ಕುಂಜತ್ತಾಯ, ಹೇರಳ, ಕಾರಂತ, ನಾರಿಂತ, ಎಡಬೆಟ್ಟನಾಯ, ಹೆಬ್ಬಾರ, ಸಂಪಿಗೆತ್ತಾಯ, ಅಬರನ್ನಾಯ, ಅರೆಮನೆತಾಯ ಇತ್ಯಾದಿ.

9)ಅಧಿವಾಸಿಗಳು (21): ಅಲೆವೂರಾಯ, ಪಾಂಗಣ್ಣಾಯ, ಕುದುರೆತಾಯ, ಬಾರಿಕಣ್ಣಾಯ, ಕೇದಟಿರಾಯ, ಅಂಬಿತಾಯ, ಇಲ್ಲಡಿತಾಯ, ಕಂಬರಣ್ಣಾಯ, ನಂಬೂರಿತಾಯ, ಕಬೆಕೋಡಿನಾಯ, ಪಂಜರೋಡಿತಾಯ, ಕಂದುರಾಯ, ನಿಂಜೂರಾಯ, ಪೆಡೆಂಗಾಯ ಇತ್ಯಾದಿ.

10) ಜನ್ನಿಗಳು (38): ಮಡಿಕೊಡನಾಯ, ಸೇಡಿಕಳತಾಯ, ತೆನಕಳತಾಯ, ಮಡುಮಣ್ಣಾಯ, ಕಾಚುಕುಜ, ಓಯಿಲಾಯ, ಮುಂಜಿತಾಯ, ಕೆಮ್ಮುಂಡೆನಾಯ, ಓಡಿಪಾಡಿನಾಯ, ಉಗ್ರಪಳ್ಳಿ, ಕುತ್ಯಾರಾಯ, ಪುದೆನಾಯ, ಊರಾಳ, ಎಡಪುಳಿತಾಯ, ಹೆಬ್ಬಾರ ಇತ್ಯಾದಿ.

ಬಿ) ಹವಿಕ ಬ್ರಾಹ್ಮಣರು: ಇವರ ವಿವರ ಈ ಮೊದಲು ಕೊಟ್ಟಿದೆ.


3) ತುಳುವದ ಪತಿತ ಬ್ರಾಹ್ಮಣರು (ಸಹ್ಯಾದ್ರಿ ಖಂಡದಲ್ಲಿ ಕಂಡು ಬರುವಂತೆ) : 1) ಪಂಚಗ್ರಾಮದವರು 2)ಮೋದಗ್ರಾಮದವರು 3) ಕುಂದವರಗ್ರಾಮದವರು 4) ಕೋಟೇಶ್ವರದವರು 5) ಸಕಲೇಶ್ವರದವರು 6) ಪಾಟಾಳಿಗಳು

ಈ ವರ್ಗಗಳ ಪಾತಿತ್ಯ ಪ್ರಾಪ್ತಿಯಾದ ಬಗೆಯನ್ನು ಸಹ್ಯಾದ್ರಿ ಖಂಡದಲ್ಲಿ ಓದಿದರೆ ಕಾರಣದ ಸಮಂಜಸತೆ ತೃಪ್ತಿಕರವಾಗಿ ಕಂಡು ಬರುವುದಿಲ್ಲ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಹಾಗೂ ಪ್ರಾದೇಶಿಕ ಕ್ಲೇಷಗಳೇ ಇದಕ್ಕೆ ಮುಖ್ಯ ಕಾರಣವೆಂಬುದನ್ನು ತಿಳಿದು ಕೊಳ್ಳಬಹುದು.

4) ಸ್ಥಾನಿಕ ಬ್ರಾಹ್ಮಣರು : ಇವರ ಚರಿತ್ರೆ ಹಿಂದಕ್ಕೆ ಕೊಟ್ಟಿದೆ.

(ಮುಗಿಯಿತು)

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಹಿಂದಿನ ಸಂಚಿಕೆಯಿಂದ)

ಅದ್ಭುತ ರಾಮಾಯಣದ ನಂತರ ಕವಿ ಮುದ್ದಣನು ಲಕ್ಷ್ಮೀಶನ ಜೈಮಿನಿ ಭಾರತದಿಂದ ಪ್ರೇರಿತನಾಗಿ ವಾರ್ಧಿಕ ಷಟ್ಪದಿಯಲ್ಲಿ 'ರಾಮಾಶ್ವಮೇಧ'ವೆಂಬ ಕೃತಿಯನ್ನು ಬರೆಯಲು ತೊಡಗಿದನು. ಇದರ ಮೊದಲ ಕೆಲವು ಪದ್ಯಗಳನ್ನು ಕವಿ ಪ್ರಕಟನೆಗಾಗಿ ಕಾವ್ಯ ಮಂಜರಿಗೆ ಕಳುಹಿಸಿ ಕೊಟ್ಟನು. ಈ ಮಧ್ಯೆ ಕುಂದಾಪುರದಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಹೋಟೆಲಿನಲ್ಲಿ ಉಳಿದುಕೊಳ್ಳುತ್ತಿದ್ದ ಮುದ್ದಣನಿಗೆ ಅಲ್ಲಿಯೇ ಒಬ್ಬ ಪ್ರತಿಭಾವಂತ ವಿದ್ವಾಂಸರ ಪರಿಚಯವಾಯಿತು. ಇವರೇ ಬವುಳಾಡಿ ವೆಂಕಟರಮಣ ಹೆಬ್ಬಾರರು. ಗ್ರಂಥ ರಚನೌತ್ಸುಕ್ಯ, ನಿರಂತರಾಭ್ಯಾಸ, ದೃಢೈಕನಿಷ್ಠೆ, ಕುಶಾಗ್ರ ಬುದ್ಧಿ,ಚಿತ್ತಸ್ಥೈರ್ಯ, ಶೀಘ್ರ ಗ್ರಹಣ ಧಾರಣ ಶಕ್ತಿ, ಗುರುಪ್ರೇರಣೆ, ಪೂರ್ವವಾಸನೋದ್ದೀಪ್ತ ಅಭಿನವಕಲ್ಪನಾ ಸಾಮರ್ಥ್ಯ ಈ ಮೊದಲಾದ ತೊರೆ, ನದಿ,ಹಳ್ಳ,ಕಾಲುವೆ, ಝರಿ, ಪ್ರಪಾತಾದಿಗಳಿಂದ ಪರಿಪೂರ್ಣವಾಗುತ್ತಿದ್ದ ಮುದ್ದಣ ಕವಿಯ ಕಾವ್ಯ ರಸಾಮೃತವಾರ್ಧಿಯನ್ನು ಉಕ್ಕೇರಿಸಲು ಬಂದ ಚಂದ್ರಮನಂತೆ ಶ್ರೀ ಬವುಳಾಡಿ ವೆಂಕಟರಮಣ ಹೆಬ್ಬಾರರು ಮುದ್ದಣನ ಜೀವನದಾಕಾಶದಲ್ಲಿ ಮೂಡಿ ಬಂದರು. ಅವರಲ್ಲಿ ತನ್ನ ಇಚ್ಛೆಯನ್ನು ಕವಿ ತೋಡಿಕೊಂಡುದೇ ಅಲ್ಲದೆ ತಾನು ಬರೆದ ರಾಮಾಶ್ವಮೇಧದ ಆರಂಭಿಕ ಪದ್ಯಗಳನ್ನು ಅವರಿಗೆ ತೋರಿಸಿದನು. ಇವನ್ನು ಓದಿದ ಶ್ರೀ ಹೆಬ್ಬಾರರು ಇವುಗಳಲ್ಲಿರುವ ರಸಹೀನತೆಯನ್ನು ಕವಿಗೆ ತೋರಿಸಿದ್ದೇ ಅಲ್ಲದೆ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುವ ಶಬ್ದರೂಪಗಳ ಆಧಾರಗಳನ್ನು ಕೇಳುತ್ತ ಬಂದರು. ಈ ಕಟುವಿಮರ್ಶೆಯಿಂದ ಮನನೊಂದ ಕವಿಯು ಸ್ವಲ್ಪ ಸಮಯ ಆ ಗ್ರಂಥದ ರಚನೆಯನ್ನು ಸ್ಥಗಿತಗೊಳಿಸಿದನು. ಆಗ ಶ್ರೀ ಹೆಬ್ಬಾರರು ಛಂದಸ್ಸಿನ ಗೊಡವೆಯನ್ನೆ ಬಿಟ್ಟು ಸಮಗ್ರವಾಗಿ ರಾಮಶ್ವಮೇಧವನ್ನು ಗದ್ಯದಲ್ಲಿಯೇ ಯಾಕೆ ರಚಿಸಬಾರದು? ಈಗಾಗಲೇ ಬರೆಯಲ್ಪಟ್ಟಿರುವ ಪದ್ಯಗಳು ಶ್ರೀ ರಾಮನ ಪಟ್ಟಾಭಿಷೇಕದ ವರೆಗೆ ಇರುವುದರಿಂದ ಅದನ್ನೆ ಪರಿಷ್ಕಾರಗೊಳಿಸಿ ಪ್ರತ್ಯೇಕ 'ಶ್ರೀ ರಾಮ ಪಟ್ಟಾಭಿಷೇಕ' ವೆಂಬ ಖಂಡಕಾವ್ಯವೊಂದರ ರಚನೆಗೆ ಪ್ರೇರಣೆ ಯನ್ನಿತ್ತರು. ಈ ಸೂಚನೆಯನ್ನು ಸ್ವೀಕರಿಸಿದ ಮುದ್ದಣನು ಈಗಾಗಲೇ ರಾಮನ ಪಟ್ಟಾಭಿಷೇಕದ ತನಕ ಬರೆದಿದ್ದ ವಾರ್ಧಿಕ ಷಟ್ಪದಿಯ ಪದ್ಯಗಳಿಗೆ ಪ್ರತ್ಯೇಕ ರೂಪವನ್ನೇ ಕೊಟ್ಟು ಅದನ್ನು ಗ್ರಂಥರೂಪವಾಗಿ ಖಂಡಕಾವ್ಯ ವೊಂದನ್ನು ರಚಿಸಿದನು. ಇದುವೇ ಶ್ರೀರಾಮ ಪಟ್ಟಾಭೀಷೇಕ ಎಂಬ ಹೆಸರಿನಿಂದ ವಾರ್ಧಿಕ ಷಟ್ಪದಿಯ ಖಂಡಕಾವ್ಯವಾಗಿ ಮೂಡಿಬಂತು. ಈ ವೇಳೆಗಾಗಲೇ ಕವಿ ಸಂಸ್ಕೃತ ಕಾವ್ಯಗಳನ್ನು ಓದಿ ಕರಗತ ಮಾಡಿಕೊಂಡಿದ್ದ ವಿದ್ವತ್ತಿ ನಿಂದಲೂ, ಬೇರೆಯವರಿಂದ ಓದಿಸಿ ತಿಳಿದು ಕೊಂಡಿದ್ದ ಸಂಸ್ಕೃತದ ಜ್ಞಾನದಿಂದಲೂ ಈ ಕಾವ್ಯವನ್ನು ಕಠಿಣವಾಗಿಯೇ ರಚಿಸಿದ್ದ ನೆನ್ನಬೇಕು. ಆರಂಭದಲ್ಲಿಯೇ ಕಂಡುಬರುವ ಸಮುದ್ರದ ವರ್ಣನೆ ಇತ್ಯಾದಿಗಳು ಜನಸಾಮಾನ್ಯರಿಗೆ ಅರ್ಥವಾಗುವ ಮಟ್ಟದಲ್ಲಿಲ್ಲ ವೆಂದರೆ ಅತಿಶಯೋಕ್ತಿಯಲ್ಲ. ಹದಿನಾಲ್ಕು ವತ್ಸರಗಳ ವನವಾಸವನ್ನು ಮುಗಿಸಿ ಸಮಯಕ್ಕೆ ಸರಿಯಾಗಿ ಅಯೋಧ್ಯೆಗೆ ಮರಳದೇ ಇದ್ದ ಶ್ರೀರಾಮನ ಬರವನ್ನು ಹಾರೈಸುತ್ತಿದ್ದ ಭರತನು-

*''ತಪ್ಪಲೊಳ್ ಕಲ್ಲರಳೆ, ಗಿರಿಯುರುಳೆ ತೆರೆ*
*ಪೊರಳೆ।*
*ತೆಪ್ಪ ಬಾನೊಳ್ ಪಾರೆ ಕಡಲಾರೆ ನಿಲಲಾರೆ।*
*ಬಪ್ಪೆನಾ ಪೊಳ್ತಿಗೆಲೆ ಭರತ ನೆಲೆಯರಿತು ಸಲೆ*
*ಸಂತಸದೆ ಪೋಪು ದೆಂದು ॥*
*ಒಪ್ಪವಂತೆನ್ನ ಕೈ ತಟ್ಟಿ ಪುರಕಟ್ಟಿ ಪುರ ಕಟ್ಟಿ ತೆರ-।*
*ಳಿಪ್ಪ ರಾಮಂ ಬಾರದಿಹ ಕಾರಣಂ ತೋರ-।*
*ದಿಪ್ಪುದಿನ್ನುಂ ಕಾಣೆ ತನ್ನಾಣೆಗಿನ್ನೂಣೆಯಂ ತರ್ಪ*
*ನೆಂತೊ ತಿಳಿಯೆ॥''*

ಎಂದು ಯೋಚಿಸುತ್ತಾನೆ'' ಗುಡ್ಡದಲ್ಲಿ ಕಲ್ಲುಗಳು ಅರಳಿದರೂ, ಪರ್ವತಗಳು ಉರುಳಿದರೂ, ಭೂಮಿಯು ಅಡಿ ಮೇಲಾದರೂ, ದೋಣಿ ಆಕಾಶದಲ್ಲಿ ಸಂಚರಿಸಿದರೂ, ಸಮುದ್ರವೇ ಬತ್ತಿದರೂ ನಾನು ಹದಿನಾಲ್ಕು ವರ್ಷದ ವನವಾಸದ ಅವಧಿ ಮುಗಿದ ಮೇಲೆ ಒಂದರೆ ಕ್ಷಣವೂ ಕಾಡಿನಲ್ಲಿ ಉಳಿಯದೇ ಅಯೋಧ್ಯೆಗೆ ಮರಳುವೆನು'' ಎಂದು ತನ್ನ ಕೈ ತಟ್ಟಿ ಭಾಷೆಯಿತ್ತು ತೆರಳಿದ್ದ ರಾಮನು ಇನ್ನು ಬರದೇ ಇರುವುದರಿಂದ ತನ್ನ ಮಾತಿಗೆ ತಪ್ಪುವವನೇ'' ಎಂಬ ಶಂಕೆಯು ಭರತನಿಗುಂಟಾಗುತ್ತದೆ. ಇದರಿಂದಾಗಿ ಅವನು ಹೀಗೂ ಯೋಚಿಸ ತೊಡಗುತ್ತಾನೆ.

*''ಪಿತನಳಿದ ಶೋಕದಿಂದುಳಿದನೋ*
*ಕೈಕೆಗೆ ಕು-।*
*ಪಿತನಾಗಿ ಬಾರದಿರ್ಪನೊ ಮುನಿಗಳೊಲ್ದು*
*ಸಲ-।*
*ಪಿತಮುಗಪ್ಪವನೆಂದು ಮನ್ನಿಸುತ್ತಿರಲಿರ್ದು*
*ಮರೆತನೋ ನಮ್ಮ ನಕಟಾ ॥*
*ಸತಿಗದೇನೆಡರಾಯ್ತೊ ಸೋದರಣ್ಣಂಗೆ ವ-। ಸತಿ*
*ಯೊಂದು ಬೇರಾಯ್ತೋ ಬರ್ಪುದಂ*
*ಕಾಣೆ ಸರ-।*
*ಸತಿಯರಸನೆನ್ನ ಪಣೆಯೊಳ್ ಬರೆದುದಂ..*
*ಟೋರಾಮನಡಿ ಯಂ ಕಾಣ್ಬೆನು ॥''*

''ತಂದೆಯಳಿದ ದುಃಖದಿಂದ ಉಳಿದನೊ, ನನ್ನ ಮಾತೆ ಕೈಕೇಯಿಯ ಮೇಲಿನ ಕೋಪದಿಂದ ಬಾರದಿರುವನೋ, ಋಷಿಮುನಿಗಳ ಆರೈಕೆಯಲ್ಲೇ ಸುಖಕಂಡು ಕಾಡಿನಲ್ಲಿ ಉಳಿದನೋ, ಇದರಿಂದಾಗಿ ನಮ್ಮನ್ನು ಮರೆತನೋ, ಅತ್ತಿಗೆ ಸೀತೆಗೇನಾದರೂ ತೊಂದರೆಯಾಯಿತೋ, ಅಣ್ಣ-ತಮ್ಮಂದಿರಲ್ಲಿ (ರಾಮ-ಲಕ್ಷ್ಮಣ) ವಿರಸವುಂಟಾಯಿತೋ-ಬರುತ್ತಿಲ್ಲವಲ್ಲಾ? ತನ್ನ ಹಣೆಯಲ್ಲಿ ಬ್ರಹ್ಮನ ಬರೆಹ ಏನಿದೆಯೋ ಗೊತ್ತಿಲ್ಲ'' ಎಂದು ಚಿಂತಿಸುವನು, ಇಲ್ಲಿ ಮೊದಲನೆಯ ಪದ್ಯದಲ್ಲಿರುವ ಸಂದೇಹಾಲಂಕಾರಗಳು ಗಮನಿಸಬೇಕಾದುವು. ಅಂತೆಯೇ ''ರಾಮನು ಅಯೋಧ್ಯೆಗೆ ಬಂದವನು ಶಬರಿ, ಸುಗ್ರೀವರ ಉದ್ಧಾರ,ರಾವಣಾದಿ,,ರಕ್ಕಸರ ಸಂಹಾರದಿಂದಗಳಿಸಿದ ಪುಣ್ಯ ಇತ್ಯಾದಿಗಳ ಭಾರದಿಂದ ತಲೆಯೇ ಕುಸಿದಂತೆ ತಾಯಿ ಕೌಸಲ್ಯೆಗೆ ಮಣಿದನು'' ಎಂಬಲ್ಲಿರುವ ಶ್ಲೇಷೆಯೂ ಕೂಡಾ ಗಮನಿಸಬೇಕಾದುದು.

ಒಟ್ಟಿನಲ್ಲಿ ಖಂಡಕಾವ್ಯವಾದ್ದರೂ ಶ್ರೀರಾಮ ಪಟ್ಟಾಭಿಷೇಕ ಗ್ರಂಥವು ಮಹಾಕವ್ಯಗಳ ಎಲ್ಲಾ ಲಕ್ಷಣಗಳನ್ನು ಹೊಂದಿದ್ದು, ಪ್ರೌಢ ಕಾವ್ಯವಾಗಿ ಪಂಡಿತರ ಮನ್ನಣೆಗೆ ಪಾತ್ರವಾಗಿದೆಯೆಂಬುದು ನಿಸ್ಸಂದೇಹ.



KISHAN



MAIN ROAD, MAJOOR & BANTAKAL.



### ಪಲ್ಲವಿ ರಾವ್ ಕೆ.




2011-12ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈಕೆ 621/625 ಅಂಕಗಳನ್ನು ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನಿಯಾಗಿರುತ್ತಾಳೆ. ಈಕೆ ಸುರತ್ಕಲ್ ವಿದ್ಯಾದಾಯಿನೀ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯಾಗಿರುತ್ತಾಳೆ. ಯೋಗಾಸನ ಸ್ಪರ್ಧೆಯಲ್ಲಿ ರಾಜ್ಯಮಟ್ಟ, ದಕ್ಷಿಣ ಭಾರತ, ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಗೆದ್ದಿರುತ್ತಾಳೆ. ಪ್ರತಿಭಾಕಾರಂಜಿಯಲ್ಲಿ (ಭಾವಗೀತೆ, ರಂಗೋಲಿ, ಸಂಸ್ಕೃತ ಭಾಷಣ) ಹೋಬಳಿ, ತಾಲೂಕು ಹಾಗೂ ಜಿಲ್ಲಾಮಟ್ಟದ ಸಾಧಕಿ. ಕರ್ನಾಟಕ ಶಾಸ್ತ್ರೀಯ ಸಂಗೀತ (ಜೂನಿಯರ ಗ್ರೇಡ್) ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾಳೆ. ಈಕೆ ಕಾಪು ಮಂಜುನಾಥ ರಾವ್ ಹಾಗೂ ಭುವನೇಶ್ವರಿ ಯವರ ಸುಪುತ್ರಿ. ಪ್ರಸ್ತುತ ಸುರತ್ಕಲ್, ಹೊಸಬೆಟ್ಟುವಿನ ರೀಜೆಂಟ್ ಪಾರ್ಕ್‌ನಲ್ಲಿ ನೆಲೆಸಿರುತ್ತಾಳೆ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಆದರ್ಶ ಕೆ.ಕೆ.




ಕಾರ್ಕಳದ ಭುವನೇಂದ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಯಾದ ಆದರ್ಶ ಕೆ.ಕೆ ಇವನು 2011-12ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಶೇ.94% ಅಂಕಗಳನ್ನು ಪಡೆದಿರುತ್ತಾನೆ (561ಅಂಕ) ಗಣಿತದಲ್ಲಿ 99, ಭೌತಶಾಸ್ತ್ರದಲ್ಲಿ 96 ಹಾಗೂ ರಸಾಯನಶಾಸ್ತ್ರದಲ್ಲಿ 90 ಅಂಕಗಳನ್ನು ಪಡೆದಿದ್ದು ಈ ಹಿಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕೂಡಾ ಶೇ.96% ಪ್ರತಿಶತ ಅಂಕಗಳನ್ನು ಗಳಿಸಿದ್ದನು. ಇತನು ಕಾರ್ಕಳದ ಶ್ರೀ ಕೇಶವ ರಾವ್ ಮತ್ತು ರಾಜೇಶ್ವರಿ ಇವರ ಪುತ್ರ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ರಾಕೇಶ್ ರಾವ್



ಈ ಬಾರಿಯ ಪರೀಕ್ಷೆಯಲ್ಲಿ ಸೌತ್‌ಶಾಲೆ (ಒಳಕಾಡು) ಇಲ್ಲಿಯ ರಾಕೇಶ ರಾವ್ ಇವನು 92% (575) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾನೆ. ಇವನು ಅಟ್ಟದಕಟ್ಟೆಯಲ್ಲಿರುವ ಶ್ರೀ ಟಿ. ಜಗದೀಶ ರಾವ್ ಮತ್ತು ಸುಂದರಿ ರಾವ್ ಇವರ ಪುತ್ರ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.


### ಶ್ರೀನಂದನ್ ರಾವ್



ಈ ಬಾರಿ ನಡೆದ ಪರೀಕ್ಷೆಯಲ್ಲಿ ಶ್ರೀನಂದನ್ ರಾವ್ 97% ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದಿದ್ದು ಇವನು ತಾಲೂಕಿಗೆ ನಾಲ್ಕನೇ ಸ್ಥಾನವನ್ನು ಪಡೆದಿರುತ್ತಾನೆ.

ದಿವಂಗತ ಮುಂಡ್ಕೂರು ವಿಶ್ವನಾಥರಾವ್ ಹಾಗೂ ಗಿರಿಜಾ ಇವರ ಮಗನಾದ ಶ್ರೀಯುತ ಹರಿನಾರಾಯಣ ರಾವ್ ಹಾಗೂ ಕ್ಷಮಾಗೌರಿ ಇವರ ಸುಪುತ್ರನಾದ ಶ್ರೀ. ಶ್ರೀನಂದನ್‌ರಾವ್ ಬಹುಮುಖ ಪ್ರತಿಭೆಯ ವಿದ್ಯಾರ್ಥಿಯಾಗಿ ರುತ್ತಾನೆ. ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿಯ ರಸಪ್ರಶ್ನೆ ವಿಭಾಗದಲ್ಲಿ ಪ್ರಥಮ, ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಅಲ್ಲದೆ ಭಗವದ್ಗೀತೆ ಕಂಠಪಾಠ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದಿರುತ್ತಾನೆ. ಅಲ್ಲದೆ ಪ್ರತಿಷ್ಠಿತ ಕಂಪೆನಿಯಾದ ಇವರು ಏರ್ಪಡಿಸಿದ ಇದರಲ್ಲಿ ಭಾಗವಹಿಸಿದ್ದು ತಾಲೂಕು ಮಟ್ಟ, ಜಿಲ್ಲಾ ಮಟ್ಟ ಹಾಗೂ ರಾಜ್ಯಮಟ್ಟದಲ್ಲಿ ದ್ವಿತೀಯ ಬಹುಮಾನ ವನ್ನು ಪಡೆದಿದ್ದು ಬೆಂಗಳೂರಿನಲ್ಲಿ ಆಯೋಜಿಸ ಲಾಗಿದ್ದ ಸಮಾರಂಭದಲ್ಲಿ ಅತ್ಯಮೂಲ್ಯವಾದ ಬಹುಮಾನವನ್ನು ಪಡೆದಿರುತ್ತಾನೆ. ಅಲ್ಲದೆ ಈತನು ಒಬ್ಬ ಉತ್ತಮ ಯಕ್ಷಗಾನ ಕಲಾವಿದನೂ ಆಗ್ಗಿದ್ದು ಪಣಂಬೂರು ಶ್ರೀ ನಂದನೇಶ್ವರ ಮಕ್ಕಳ ಮೇಳ ತಂಡದಿಂದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಇಂಗ್ಲೀಷ ಹಾಗೂ ಕನ್ನಡ ಭಾಷೆಯಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿರುತ್ತಾನೆ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಸನ್ನಿಧಿ ರಾವ್



ಪಡುಬೆಳ್ಳೆಯ ದಿ| ದೇವರಾವ್‌ರ ಪೌತ್ರ. ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿರುವ ಬೆಳ್ಳೆಯ ಸದಾಶಿವರಾವ್ ಮತ್ತು ಶ್ರೀಮತಿ ಸಹನಾ ಎಸ್.ರಾವ್‌ರವರ ಪುತ್ರ ಚಿ| ಸನ್ನಿಧಿರಾವ್, ಎಸ್.ಎಸ್.ಎಲ್.ಸಿ 2012ರ ಪರೀಕ್ಷೆಯಲ್ಲಿ ಶೇಕಡಾ 81 (506) ಅಂಕವನ್ನು ಗಳಿಸಿರುತ್ತಾನೆ. ಇವನು ಶ್ರೀ ಕಾವೇರಿ ಪ್ರೌಢಶಾಲೆ, ಕುವೆಂಪುನಗರ, ಮೈಸೂರಿನ ವಿದ್ಯಾರ್ಥಿ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ವಂದನಾ




ಪಡುಬೆಳ್ಳೆಯ ದಿ| ದೇವರಾವ್‌ರ ಪೌತ್ರಿ, ಪ್ರಸ್ತುತ ಜಾನುವಾರುಕಟ್ಟೆಯಲ್ಲಿ ವಾಸವಾಗಿರುವ ಬೆಳ್ಳೆಯ ವಾಮನರಾವ್ ಮತ್ತು ಶ್ರೀಮತಿ ಪೂರ್ಣಿಮಾ ವಿ. ರಾವ್‌ರವರ ಪುತ್ರಿ ಕು| ವಂದನಾ, ಎಸ್.ಎಸ್.ಎಲ್.ಸಿ 2012ರ ಪರೀಕ್ಷೆಯಲ್ಲಿ ಶೇಕಡಾ 96.16 (601) ಅಂಕವನ್ನು ಗಳಿಸಿರುತ್ತಾಳೆ. ಈಕೆ ಹೇರಾಡಿಯ ಶ್ರೀ ವಿದ್ಯೇಶ ವಿದ್ಯಾಮಾನ್ಯ ನೇಶನಲ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ವೈ. ಸುನೀಲ್ ರಾವ್



ಎ.ಕೆ.ಆರ್. ಆಂಗ್ಲ ಮಾಧ್ಯಮ ಶಾಲೆ, ಕುಂದಾಪುರ ಇಲ್ಲಿ ವ್ಯಾಸಂಗ ಮಾಡುತ್ತಿರುವ ವೈ. ಸುನೀಲ್ ರಾವ್ ಇವನು 2011-12ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.87 ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾನೆ. ಈತನು ಅರಸರಬೆಟ್ಟು ಬೀಜಾಡಿ ಕೋಟೇಶ್ವರದಲ್ಲಿ ವಾಸವಾಗಿರುವ ಶ್ರೀಮತಿ ಶುಭ ಹಾಗೂ ಶ್ರೀ ಎಲ್ಲೂರು ಮನೋಹರ ರಾವ್ ಇವರ ಪುತ್ರ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕೃತ್ತಿವಾಸ



ಜೈನ ಪದವಿ ಪೂರ್ವ ಕಾಲೇಜು ಮೂಡಬಿದಿರೆ ಇಲ್ಲಿ ವ್ಯಾಸಂಗ ಮಾಡುತ್ತಿರುವ ಕೃತ್ತಿವಾಸ ಇವನು 2011-2012ನೇ ಸಾಲಿನ ಪಿ.ಯು.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಶೇ 87.33 ಅಂಕದೊಂದಿಗೆ (ಪಿ.ಸಿ.ಯಂ. ಬಿಯಲ್ಲಿ ಶೇ 90.05) ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾನೆ. ಈತನು ಉದ್ಯಮಿ ಯಂ ಜಗದೀಶರಾವ್ ಅಲಂಗಾರು ಹಾಗೂ ಶ್ರೀಮತಿ ವೃಂದಾ ಇವರ ದ್ವಿತೀಯ ಪುತ್ರನಾಗಿರುತ್ತಾನೆ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಕು| ಪ್ರಗತಿ ಭಂಡಿ



ಮಣಿಪಾಲ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಕು| ಪ್ರಗತಿ ಭಂಡಿ ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 613 (98.09%) ಅಂಕಗಳನ್ನು ಪಡೆದು ಉಡುಪಿ ಜಿಲ್ಲೆಗೆ ನಾಲ್ಕನೇ ಸ್ಥಾನವನ್ನು ಹಾಗೂ ರಾಜ್ಯಕ್ಕೆ ಒಂಬತ್ತನೇ ಸ್ಥಾನವನ್ನು ಗಳಿಸಿರುತ್ತಾಳೆ. ಈಕೆ ಇಂಗ್ಲೀಷ್, ಕನ್ನಡ, ಹಿಂದಿ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಿಲ್ಲಾಮಟ್ಟದಲ್ಲಿ ಸ್ಥಾನವನ್ನು ಗಳಿಸಿರುವುದು ಅಲ್ಲದೆ ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ ಆಗಿರುತ್ತಾಳೆ ಈಕೆ ಹರಿಹರಪುರ,' ಕೊಪ್ಪ ತಾಲೂಕು ,ಸಿಂಡಿಕೇಟ್ ಬ್ಯಾಂಕ್ ಮೇನೇಜರ ಶ್ರೀ ರವೀಂದ್ರ ಭಂಡಿ ಪೆರ್ಡೂರು ಹಾಗೂ ಜಿಲ್ಲಾ ಪಂಚಾಯತ್ ಇಂಜಿನಿಯರ್ ವಿಭಾಗದ ಉಡುಪಿ ಇಲಾಖೆಯ ಉದ್ಯೋಗಿ ಶ್ರೀಮತಿ ವಾಣಿ ಭಂಡಿಯವರ ಪುತ್ರಿ ಈಕೆ ಪಡೆದ ಅಂಕಗಳು-ಗಣಿತ 100, ವಿಜ್ಞಾನ-99, ಸಮಾಜ ವಿಜ್ಞಾನ 98, ಸಂಸ್ಕೃತ 122, ಕನ್ನಡ 99, ಮತ್ತು ಇಂಗ್ಲೀಷ್ 95. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಶಿವಕುಮಾರ್ ವಿ.



ಬೆಂಗಳೂರಿನ ಮಾರ್ಟಿನ್ ಲೂಥರ್ ಇಂಗ್ಲೀಷ್ ಸ್ಕೂಲಿನ ವಿದ್ಯಾರ್ಥಿ ವಿ. ಶಿವಕುಮಾರನು ಈ ಬಾರಿಯ ( ) ಪರೀಕ್ಷೆಯಲ್ಲಿ ಶೇ.91.13 ಅಂಕಗಳನ್ನು ಪಡೆದಿರು ತ್ತಾನೆ. ಇವನು ಶ್ರೀ ಸುರೇಶ್ ರಾವ್ ಮತ್ತು ಶ್ರೀಮತಿ ಗೌರಿ ದಂಪತಿಗಳ ಪುತ್ರ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

### ಯು.ಶಿವಕುಮಾರ



ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಉದ್ಯೋಗಿ ಶ್ರೀ ಯು ಆಶೀತ್ ಕುಮಾರ್ ಮತ್ತು ಶ್ರೀಮತಿ ಕಾಂತಾಮಣಿಯವರ ಪುತ್ರ ಯು.ಶಿವಕುಮಾರ ಮಣಿಪಾಲದ ಜ್ಯೂನಿಯರ್ ಕಾಲೇಜ್‌ನಲ್ಲಿ ಕನ್ನಡ ಮಾಧ್ಯಮದಲ್ಲಿ 553 ಅಂಕಗಳನ್ನು ಗಳಿಸಿ (88.48%) ವಿಶಿಷ್ಟಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಇವನಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಅಭಿನಂದನೆಗಳು


### ಕು। ನಂದಿತಾ ಎಸ್.ರಾವ್



ಕು। ನಂದಿತಾ ಎಸ್ ರಾವ್ ಈ ಬಾರಿಯ ಎಸ್.ಎಸ್.ಎಲ್. ಸಿ ಪರೀಕ್ಷೆಯಲ್ಲಿ 545 (87.20%) ಅಂಕಗಳನ್ನು ಗಳಿಸಿ ವಿಶಿಷ್ಟಶ್ರೇಣಿಯಲ್ಲಿ ಪಾಸಾಗಿರುತ್ತಾಳೆ. ಇವಳು ಗರ್ಲ್ಸ್ ಹೈಸ್ಕೂಲು, ಆರ್. ಕೆ. ಪುರಂ ಹಾಸನದ ವಿದ್ಯಾರ್ಥಿ. ಇವಳು ಯಕ್ಷಗಾನ ಕಲಾವಿದೆ ಯಾಗಿದ್ದು ಸಂಗೀತ, ಭರತ ನಾಟ್ಯ ಜೂನಿಯರ್ ಗ್ರೇಡ್ ಪರಿಕ್ಷೆಯಲ್ಲೂ ಡ್ರಾಯಿಂಗ್ ಸೀನಿಯರ್ ಗ್ರೇಡ್ ಪರಿಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾಳೆ. ಭಾಷಣ, ಛದ್ಮವೇಷ, ಗೀತಾ ಕಂಠಪಾಠ ಸ್ಪರ್ಧೆಗಳಲ್ಲಿಯೂ ಬಹುಮಾನಗಳನ್ನು ಪಡೆದಿರುತ್ತಾಳೆ.

ಇವಳು ಹವ್ಯಾಸ ಯಕ್ಷಗಾನ ಕಲಾವಿದ ನ್ಯೂ ಇಂಡಿಯ ಎಶ್ಯುರೆನ್ಸ್ ಕಂಪೆನಿ ಹಾಸನ ಇಲ್ಲಿ ಪ್ರಬಂಧಕರಾಗಿ ಸೇವೆ ಸಲ್ಲಿಸುತ್ತಿರುವ ಪಲಿಮಾರು ಸಂಜಯ ಕುಮಾರ ಮತ್ತು ಬಜಕೂಡ್ಲು ಭಾರತಿ ಎಸ್ ರಾವ್ ದಂಪತಿಗಳ ಪುತ್ರಿ.

### ಕೆ.ಸುಪ್ರಿಯಾ ರಾವ್



ಉಡುಪಿ ಸೈಂಟ್ ಸಿಸಿಲೀಸ್ ಗರ್ಲ್ಸ್ ಹೈಸ್ಕೂಲ್‌ನ ಕೆ.ಸುಪ್ರಿಯಾ ರಾವ್ 2012ನೇ ಸಾಲಿನ ಪರಿಕ್ಷೆಯಲ್ಲಿ 95% ಅಂಕಗಳನ್ನು ಪಡೆದಿರುತ್ತಾಳೆ. ಈಕೆ ಕುಕ್ಕಿಕಟ್ಟೆಯಲ್ಲಿ ವಾಸಿಸುತ್ತಿರುವ ಶ್ರೀ ಗಣೇಶ ಕೆ.ಆರ್. ಹಾಗೂ ಶ್ರೀಮತಿ ಸುಧಾರಾವ್ ಇವರ ಪುತ್ರಿ. ಕಳೆದ ಮೂರು ವರ್ಷಗಳಲ್ಲಿ ಸತತವಾಗಿ ಜಿಲ್ಲಾಮಟ್ಟದ ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಶಾಲೆಯನ್ನು ಪ್ರತಿನಿಧಿಸುತ್ತಿರುವ ಈಕೆ ಕುಕ್ಕಿಕಟ್ಟೆಯ ಶ್ರೀಮತಿ ರಮಾದೇವಿ ಹಾಗೂ ಬೆಂಗಳೂರಿನಲ್ಲಿರುವ ಶ್ರೀ ಎಂ.ಕೃಷ್ಣಮೂರ್ತಿ ರಾವ್ ಶ್ರೀಮತಿ ಭವಾನಿರಾವ್ ಇವರ ಮೊಮ್ಮಗಳು. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಗೃಹಪ್ರವೇಶ

ಕುಂಜಾರುಗಿರಿ ಶ್ರೀ ಕೆ. ಹರಿನಾರಾಯಣ ರಾವ್ ಮತ್ತು ಶ್ರೀಮತಿ ಪ್ರೇಮಾ ಇವರು ಮಹಾರಾಷ್ಟ್ರದ ಅಹಮ್ಮದ್ ನಗರದಲ್ಲಿ ನಿರ್ಮಿಸಿದ ನೂತನ ಗೃಹ 'ಅನ್ನಪೂರ್ಣ' ಇದರ ಪ್ರವೇಶೋತ್ಸವವನ್ನು ತಾ.28-4-2012ರಂದು ನೆರವೇರಿಸಿದರು.

★★★ ★★★

ಪಡುಬಿದ್ರಿ ದಿ। ಕೆ. ಪದ್ಮನಾಭ ಶಾಸ್ತ್ರಿಯವರ ಪುತ್ರಿ ಲಲಿತಾಂಬ ಯೋಗಾನಂದ ಶಾಸ್ತ್ರಿಯವರು ಪಡುಬಿದ್ರಿ ಕಾರ್ಕಳ ರಸ್ತೆಯಲ್ಲಿರುವ 'ಅಭಿಜಿನ್ ನಿಲಯ' ಎಂಬ ನವೀಕೃತ ಗೃಹದ ಪ್ರವೇಶೋತ್ಸವ ವನ್ನು ತಾ.6-4-2012ರಂದು ನೆರವೇರಿಸಿದರು.

★★★ ★★★

ಎಲ್ಲೂರು ಶ್ರೀಮತಿ ವೈ.ಸುಲೋಚನಾ ಸದಾಶಿವರಾವ್ ಇವರ ಪುತ್ರ ಶ್ರೀ ಜ್ಯೋತೀಂದ್ರನಾಥ ಇವರು ಉಚ್ಚಿಲದಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ ಶಿವಲೋಚನ ಇದರ ಪ್ರವೇಶೋತ್ಸವವನ್ನು ತಾ 7-6-2012ರಂದು ನೇರವೇರಿಸಿದರು.

★★★ ★★★

ಬೈಂದೂರಿನ ಶ್ರೀಮತಿ ಸಂಧ್ಯಾ ಮತ್ತು ಶ್ರೀ ಲೋಕೇಶ್ವರ ಎಂ. ಇವರು ಬೈಂದೂರು ಪಡುವರಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ ಸುಮುಖ ಇದರ ಪ್ರವೇಶೋತ್ಸವವನ್ನು ತಾ.8-6-2012 ನೆರವೇರಿಸಿದರು.

★★★ ★★★

ಶ್ರೀಯುತ ಬೊಕ್ಕಸ ಚಂದ್ರಶೇಖರ ಇವರು ಅಲಂಗಾರಿನಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ ಮಾತೃ ಕೃಪಾ ಇದರ ಪ್ರವೇಶೋತ್ಸವವನ್ನು ತಾ.8-6-2012 ರಂದು ನೇರವೇರಿಸಿದ್ದಾರೆ.

## ಉಪನಯನ

### ಚಿ। ಸುಧನ್ವ

ಶ್ರೀಮತಿ ಶೈಲಜಾ ಮತ್ತು ಶ್ರೀ ನಾಗೇಶ ರಾವ್ ಸಾಂತೂರು ಇವರ ಪುತ್ರ ಚಿ। ಸುಧನ್ವ ಇವನ ಬ್ರಹ್ಮೋಪದೇಶವು ತಾ.31-5-2012ರಂದು ಮಂಗಳೂರಿನ ಬಿಜೈಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾ ಸದನ ದಲ್ಲಿ ನೆರವೇರಿತು.

★★★★

### ಚಿ। ಪ್ರಜ್ವಲ್ ಮತ್ತು ಚಿ। ಶ್ರೇಯಸ್

ಅಲೆವೂರು ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ಶ್ರೀನಿವಾಸ ರಾವ್ ಇವರ ಪುತ್ರ ಚಿ। ಪ್ರಜ್ವಲ್ ಮತ್ತು ಅಲೆವೂರು ಶ್ರೀಮತಿ ರಜನಿ ಮತ್ತು ಶ್ರೀ ವಿಠಲ್ ರಾವ ಇವರ ಪುತ್ರ ಚಿ। ಶ್ರೇಯಸ್ ಇವರ ಬ್ರಹ್ಮೋಪದೇಶವು ತಾ.30-5-2012ರಂದು ಕಡಿಯಾಳಿ ಕಾತ್ಯಾಯಿನಿ ಸಭಾ ಭವನದಲ್ಲಿ ನೆರವೇರಿತು.

★★★★

### ಚಿ। ತುಷಾರ

ಎರ್ಮಾಳಿನ ಶ್ರೀಮತಿ ಜ್ಯೋತಿ ಲಕ್ಷ್ಮೀ ಮತ್ತು ಶಿವಾನಂದ ಇವರ ಪುತ್ರ ಚಿ। ತುಷಾರನ ಬ್ರಹ್ಮೋಪದೇಶವು ತಾ.30-5-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

### ಚಿ। ಆದಿತ್ಯ

ಕಬ್ಬಿನಾಲೆಯ ಶ್ರೀಮತಿ ವಿನುತ ಮತ್ತು ಶ್ರೀ ಗಣೇಶ ಹೆಬ್ಬಾರರ ಪುತ್ರ ಚಿ। ಆದಿತ್ಯನ ಬ್ರಹ್ಮೋಪದೇಶವು ತಾ.13-6-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಭಗವತ್ಪಾದರ ಜೀವನ ನಮಗೆ ದಾರಿದೀಪ : ಡಾ ನಿರಂಜನ ಭಟ್

ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾ ಸರ್ವೇ ಭದ್ರಾಣಿ ಪಶ್ಯಂತು ಮಾಕಶ್ಚಿ ದುಃಖ ಭಾಗ್ಭವೇತ್ ಎಂಬ ಪವಿತ್ರ ಪ್ರಾರ್ಥನೆಯೊಂದಿಗೆ ಇಡೀ ಜಗತ್ತಿಗೆ ಒಳಿತನ್ನು ಬಯಸಿದ,ದಾರಿ ತೋರಿದ ಮಹಾಮಹಿಮರಾದ ಶ್ರೀ ಶಂಕರಭಗವತ್ಪಾದರ ಜೀವನ ನಮಗೆ ದಾರಿದೀಪವಾಗಿದೆ. ಷಣ್ಮತ ಸ್ಥಾಪಕರಾಗಿ ಇಡೀ ಭರತಖಂಡವನ್ನು ಕಾಲ್ನಡಿಗೆಯಲ್ಲೇ ಸಂಚರಿಸಿ ವಿಶ್ವಶಾಂತಿಗಾಗಿ, ವಿಶ್ವಸಹೋದರತೆಗಾಗಿ, ರಾಷ್ಟ್ರೀಯ ಭಾವೈಕ್ಯತೆಗಾಗಿ ಶ್ರಮಿಸಿ ಸದಾಚಾರ ಜ್ಯೋತಿಯನ್ನು ಬೆಳಗಿಸಿದ ಭಗವತ್ಪಾದರ ದಿವ್ಯ ಸಂದೇಶ ಮಾನವನ ದುಃಖ ದುಮ್ಮಾನಗಳನ್ನು ಹೋಗಲಾಡಿಸಿ ನೆಮ್ಮದಿ ಮೂಡಿಸಬಲ್ಲದು. ಕುದಿಯುವ ಕಬ್ಬಿಣದ ದ್ರವವನ್ನೆ ಕುಡಿದು ಶಂಕರಾಚಾರ್ಯರು, ವಿಷವನ್ನೆ ಕುಡಿದು ನೀಲಕಂಠನಾದ ಶಿವನ ಅವತಾರವೇ ಸರಿ. ಅವರ ದಿವ್ಯಸಂದೇಶದ ಅನುಕರಣೆ ಮತ್ತು ಆಚರಣೆ ಮೂಲಕ ಬದುಕು ಸಾರ್ಥಕಪಡಿಸಿಕೊಳ್ಳೋಣ'' ಎಂದು ಸಂಸ್ಕೃತ ವಿದ್ವಾಂಸ ಪಾವಂಜೆಯಾಜಿ ಡಾ॥ ನಿರಂಜನಭಟ್ ನುಡಿದರು.

ಶ್ರೀಯುತರು ಕಾರ್ಕಳ ಶಂಕರ ಪ್ರತಿಷ್ಠಾನದ ವತಿಯಿಂದ 28-4-2012 ರಂದು ಹಮ್ಮಿಕೊಳ್ಳಲಾಗಿದ್ದ ಶಂಕರ ಜಯಂತಿ ಉತ್ಸವದ ಧಾರ್ಮಿಕ ಉಪನ್ಯಾಸ ನೀಡುತ್ತಿದ್ದರು. ಶ್ರೀ ದುರ್ಗಾ ಪ್ರಸಾದ ಭವನದಲ್ಲಿ ನಡೆದ ಕಾರ್ಯಕ್ರಮ ಶ್ರೀ ನಿರಂಜನಭಟ್ಟರ ಪ್ರಾರ್ಥನೆ ಮತ್ತು ಭಕ್ತರ ಲಿಂಗಾಷ್ಟಕ ಪ್ರಾರ್ಥನೆಯೊಂದಿಗೆ ಆರಂಭ ವಾಯಿತು. ರುದ್ರಾಭಿಷೇಕ, ರುದ್ರ ಪಾರಾಯಣದ ನಂತರ ಮಹಾಪೂಜೆ ನಡೆಯಿತು ನೆರೆದ ಭಕ್ತ ಸಮೂಹ ಸಾಮೂಹಿಕವಾಗಿ ಶ್ರೀ ಶಂಕರಾಚಾರ್ಯ ವಿರಚಿತ ಶಿವಮಾನಸ ಪೂಜಾಸ್ತೋತ್ರ ಮತ್ತು ಶಿವಪರಾಧ ಕ್ಷಮಾಪಣ ಸ್ತೋತ್ರಮ್ ಪಠಿಸಿದರು. ಡಾ। ನಿರಂಜನ ಭಟ್ಟರು ಅದರ ಅರ್ಥ ವಿವರಿಸಿದರು. ಡಾ। ನಿರಂಜನಭಟ್ಟರಿಗೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಮುನಿಯಾಲು ಶ್ರೀ ಎ. ರಾಮಮೋಹನರಾಯರು ಶೃಂಗೇರಿ ಗುರುಗಳು ಕಳುಹಿಸಿಕೊಟ್ಟ ಸ್ಮರಣಿಕೆ ನೀಡಿ, ಶಾಲು ಹೊದಿಸಿ, ಗೌರವಿಸಿ ಧನ್ಯವಾದ ಸಲ್ಲಿಸಿದರು. ಅಧಿಕ ಸಂಖ್ಯೆಯಲ್ಲಿ ಸೇರಿದ ಸದಸ್ಯರಿಗೆ ಶ್ರೀಮತಿ ವತ್ಸಲ ಮತ್ತು ಶ್ರೀ ಸದಾನಂದ ಶಾನುಭೋಗರು ಉಪಾಹಾರ ಏರ್ಪಡಿಸಿದ್ದರು.

**- ಸಾವಿತ್ರಿ ಮನೋಹರ್, ಕಾರ್ಕಳ**

## ಶ್ರೀಕ್ಷೇತ್ರ ಪಾವಂಜೆಯಲ್ಲಿ ಸಂಪನ್ನಗೊಂಡ ಶ್ರೀ ಶ್ರೀ ಜಗದ್ಗುರುಗಳ 62ನೇ ವರ್ಧಂತ್ಯುತ್ಸವ

ಸರಕಾರದ ಗೃಹ ಇಲಾಖೆಯ ಅಧೀನವಿರುವ ಪೋಲೀಸ್ ಇಲಾಖೆಯಲ್ಲಿ ಸಿಗುವಂತಹ ಅತ್ಯುನ್ನತ ಪದಕಗಳಿಗಿಂತಲೂ, ಶ್ರೀ ದೇವರ ಅನುಗ್ರಹ ಪೂರ್ವಕವಾಗಿ, ವೇದೋಕ್ತವಾಗಿ ಹಾಗೂ ವಿದ್ವಜ್ಜರ ಸಮ್ಮುಖದಲ್ಲಿ, ಶ್ರೀ ಶ್ರೀ ಜಗದ್ಗುರುಗಳ ಪ್ರಸಾದ ರೂಪದಲ್ಲಿ ಸಿಗುವಂತಹ ಸನ್ಮಾನ ಬಹಳಷ್ಟು ಮಹತ್ವಪೂರ್ಣವಾದದ್ದು, ಇಂತಹ ಸನ್ಮಾನವನ್ನು ಸ್ವೀಕರಿಸಿ ನನ್ನ ಹೃದಯ ತುಂಬಿ ಬಂದಿದೆ ಎಂದು

ಪೋಲಿಸ ಇನ್ಸಪೆಕ್ಟರ ಶ್ರೀಯುತ ಎಚ್.ಜಿ.ವೆಂಕಟೇಶ ಪ್ರಸನ್ನ ಅವರು ಶೃತಪಡಿಸಿದರು. ಅವರು ಶ್ರೀ ಕ್ಷೇತ್ರದಲ್ಲಿ ಶ್ರೀ ಶೃಂಗೇರಿ ಶೃಂಕರಾಚಾರ್ಯ ಮಹಾಸಂಸ್ಥಾನ ಶ್ರೀ ಶಾರದಾ ಪೀಠಾಧೀಶ್ವರರೂ, ನಮ್ಮ ಕುಲಗುರುಗಳೂ, ಆದ ಜಗದ್ದುರು ಶ್ರೀ ಶ್ರೀ ಭಾರತಿ ತೀರ್ಥಮಹಾಸ್ವಾಮಿಗಳವರ 62ನೇ ವರ್ಧಂತಿ ಉತ್ಸವದ ಅಂಗವಾಗಿ ಹಮ್ಮಿಕೊಂಡ ವಿದ್ವತ್ ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಿದ್ದರು. ಅವರು ತಮ್ಮ ಆಧ್ಯಾತ್ಮಿಕ ಚಿಂತನೆಯ ರಸಧಾರೆಯನ್ನು ನೆರೆದ ಭಕ್ತರಿಗೆ ಹಂಚುತ್ತಾ ವಿದ್ವತ್ ಸನ್ಮಾನದ ಮಹತ್ವ ಹಾಗೂ ಶ್ರೀ ಶ್ರೀ ಜಗದ್ಗುರುಗಳವರ ತಪಸ್ಸಿನ ಶಕ್ತಿಯನ್ನು ಉದಾರಣೆಗಳೊಂದಿಗೆ ವಿವರಿಸಿದರು.

ತಾ.28.3.2012ರಂದು ಚೈತ್ರ ಶುದ್ಧ ಷಷ್ಠಿಯಂದು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಹುಷ; ಕೋಟೆ ಕಾರಿನ ಶಂಕರಮಠವನ್ನು ಬಿಟ್ಟರೆ ನಮ್ಮ ಸಮಾಜದಲ್ಲಿ ಅದೇದಿನ ಗುರುಗಳ ವರ್ಧಂತಿಯನ್ನು ಆಚರಿಸುವ ಸಂಪ್ರದಾಯ ಪಾವಂಜೆಯಲ್ಲಿ ಮಾತ್ರ ಇದೆ ಎಂದು ತಿಳಿಯುತ್ತದೆ. ಹಾಗೂ ಪ್ರತೀ ವರ್ಷವೂ ಅನೂಚಾನವಾಗಿ ಈ ಕಾರ್ಯಕ್ರಮವನ್ನು ದೇವಳದವತಿಯಿಂದ ನಡೆಸಲಾಗುತ್ತದೆ. ಅಂತೆಯೇ ಈ ವರ್ಷವೂ ಬೆಳಿಗ್ಗೆ ಶ್ರೀ ಶಂಕರಾಚಾರ್ಯರ ಸನ್ನಿಧಿಯಲ್ಲಿ ರುದ್ರಾಭಿಷೇಕ ಹಾಗೂ ಸಂಜೆ ಅಷ್ಠಾವಧಾನ ಸಹಿತವಾಗಿ ವಿಶೇಷ ಪೂಜೆಯು ನೆರವೇರಿತು.

ಶ್ರೀ ದೇವರ ನಿತ್ಯರಂಗಪೂಜೆ ಸಂಪನ್ನಗೊಂಡು ಪ್ರಸಾದ ವಿತರಣೆಯಾದ ಮೇಲೆ ಶ್ರೀಯುತರಿಗೆ ವಿದ್ವತ್ ಸನ್ಮಾನವನ್ನು ಅತ್ಯಂತ ಸರಳವಾಗಿ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಧರ್ಮದರ್ಶಿಗಳಾದ ಶ್ರೀಯುತ ಡಾ। ಯಾಜಿ ಎಚ್. ನಿರಂಜನ ಭಟ್ಟರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಡಳಿತ ಮುಕ್ತೇಸರರಾದ ಶ್ರೀ ಎಂ. ಶಶೀಂದ್ರಕುಮಾರ ವೇದಿಕೆಯಲ್ಲಿದ್ದರು. ದೇವಳದ ಆಡಳಿತ ಮಂಡಳಿಯ ಸರ್ವಸದಸ್ಯರೂ, ಸಿಬ್ಬಂದಿ ವರ್ಗದವರೂ ಉಪಸ್ಥಿತರಿದ್ದು ಸಹಕರಿಸಿದರು. ಕೊನೆಯಲ್ಲಿ ಪ್ರಸಾದ ಭೋಜನ ವಿತರಣೆಯೊಂದಿಗೆ ಕಾರ್ಯಕ್ರಮ ಸಮಾಪನ ಗೊಂಡಿತು.

**-ಸ್ಕಂದಕುಮಾರ್, ಮುಕ್ಕ**

## ವಿದೇಶ ಪಯಣ

ಸದ್ಯ ಬೆಂಗಳೂರಿನಲ್ಲಿ ವಿಶ್ರಾಂತಿ ಜೀವನ ನಡೆಸುತ್ತಿರುವ ಶ್ರೀ ಬೋಳ ಅಚ್ಯುತ ರಾವ್ ಮತ್ತು ವತ್ಸಲಾರವರ ಪುತ್ರಿ ಚಿ। ಸೌ। ರಮ್ಯಾಳು ತಾ.15-5-2012ರಂದು ಗೆ ಪ್ರಯಾಣ ಗೈದಿದ್ದಾರೆ. ಇವರು ( ನಲ್ಲಿ ಇಂಜಿನಿಯರಾಗಿದ್ದು ಗೆ ವರ್ಗಾವಣೆಗೊಂಡು ಈ ಮೊದಲೆ ಅಲ್ಲಿ ಸೇರಿಕೊಂಡಿರುವ ಪತಿ ಶ್ರೀ ಹರಿಸೂದನರವರನ್ನು ಕೂಡಿಕೊಂಡಿದ್ದಾರೆ.

★★★★

ಕಾರ್ಕಳದಲ್ಲಿ ವಾಸ್ತವ್ಯ ವಿರುವ ಇನ್ನಕೇದಗೆ ಕೃತ್ತಿವಾಸ ಶರ್ಮ ಮತ್ತು ಶ್ರೀಮತಿ ಪ್ರಭಾವತಿ ಇವರು ತಾ 10-6-2012ರಂದು ಉತ್ತರ ಅಮೇರಿಕಾದ ಮಿನ್ನಾ ಪೋಲಿಸ್‌ನಲ್ಲಿರುವ ಹಿರಿಯ ಪುತ್ರ ಐ ಕೆ ರಾಜೇಶನವರಲ್ಲಿಗೆ ವಿದೇಶ ಪ್ರಯಾಣ ಕೈಗೊಂಡಿದ್ದಾರೆ.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಶೋಭಾ ಮತ್ತು ಶ್ರೀ ಬಾಲಚಂದ್ರ ರಾವ್ ಚಿಟ್ಪಾಡಿ ಇವರ ಪುತ್ರಿ **ಅಪರ್ಣಾ** ಹಾಗೂ ಶ್ರೀಮತಿ ಪ್ರಭಾವತಿ ಮತ್ತು ಶ್ರೀ ಶ್ರೀನಿವಾಸ ರಾವ್ ಮಂಗಳೂರು ಇವರ ಪುತ್ರ **ಗಣೇಶ** ಇವರ ವಿವಾಹವು ತಾ 31-5-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಮಂಗಳೂರಿನ ವಿಮಾನ ನಿಲ್ದಾಣ ನಿರ್ದೇಶಕರಾದ ಶ್ರೀ ಎಂ.ಆರ್ ವಾಸುದೇವ ಮತ್ತು ಶ್ರೀಮತಿ ನಾಗರತ್ನಾ ದಂಪತಿಗಳ ಪುತ್ರ **ಡಾ| ಎಂ.ವಿ ಕಾರ್ತಿಕ** ಹಾಗೂ ಕಾಸರಗೋಡಿನ ಡಾ| ಎಂ ಸತ್ಯನಾಥ ಮತ್ತು ಡಾ| ಗೀತಾ ದಂಪತಿಗಳ ಪುತ್ರಿ **ಡಾ| ಶ್ರೇಯಸ್ವಿ** ಇವರ ವಿವಾಹವು 1-6-2012ರಂದು ಮಂಗಳೂರಿನ ಸಂಘ ನಿಕೇತನದಲ್ಲಿ ನಡೆಯಿತು.

★★★★

ಕುಂಜಾರಿನ ಶ್ರೀಮತಿ ವಸುಧಾ ಮತ್ತು ಶ್ರೀ ಬಿ ಮೋಹನ ರಾವ್ ದಂತಿಗಳ ಪುತ್ರಿ **ಅಕ್ಷತಾ** ಮತ್ತು ಬೆಂಗಳೂರಿನ ಶ್ರೀಮತಿ ಮತ್ತು ಶ್ರೀ ಸಿ.ಎಂ. ನಾಗೇಂದ್ರ ರಾಯರ ಪುತ್ರ **ಅಜಿತ್ ಎನ್.ರಾವ್** ಇವರ ವಿವಾಹವು ತಾ 10-6-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಮುದರಂಗಡಿ ಶ್ರೀಮತಿ ರೋಹಿಣಿ ಮತ್ತು ಶ್ರೀ ಬಾಬು ರಾಯರ ಪುತ್ರ **ಶಿವ ಪ್ರಸಾದ** ಹಾಗೂ ಕುಂಜಾರು ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ನರಸಿಂಹ ರಾಯರ ಪುತ್ರಿ **ಶುಭ** ಇವರ ವಿವಾಹವು ತಾ 13-6-2012 ಉಡುಪಿ ರಥಬೀದಿಯ ಭಂಡಾರಕೇರಿ ಮಠದಲ್ಲಿ ಸಭಾಭವನದಲ್ಲಿ ನೆರವೇರಿತು.

★★★★

ಶ್ರೀಮತಿ ಪದ್ಮರಾವ್ ಹಾಗೂ ತಂತ್ರಾಡಿ ಕೀರ್ತಿ ಶೇಷ ಸರ್ವೋತ್ತಮ ರಾವ್‌ರವರ ಜ್ಯೇಷ್ಠಪುತ್ರ **ಆದರ್ಶ್ ರಾವ್** ಹಾಗೂ ಶ್ರೀಮತಿ ಪ್ರತಿಮಾ ಮತ್ತು ಶ್ರೀ ಜಂಬೆ ಶ್ರೀಪತಿ ಹೆಬ್ಬಾರರ ಪುತ್ರಿ **ನೀಲಿಮಾ** ಇವರ ವಿವಾಹವು ತಾ.14-6-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಇಂದಿರಾ ರವರ ದ್ವಿತೀಯ ಪುತ್ರ **ರಘುರಾಮ** ಹಾಗೂ ಶ್ರೀಮತಿ ವಸಂತ ಮತ್ತು ಶ್ರೀ ಶ್ರೀನಾಥರ ಪುತ್ರಿ **ಗೌತಮಿ** ಇವರ ವಿವಾಹವು ತಾ.30-5-2012ರಂದು ಬೆಳ್ಮಣ್ಣು ಶ್ರೀ ದುರ್ಗಾಪರಮೇಶ್ವರೀ ದೇವಳದ ಸಭಾಭವನದಲ್ಲಿ ನೆರವೇರಿತು.

★★★★

ಉಡುಪಿಯ ದಿ| ಯು. ಶ್ರೀಪತಿ ರಾವ್‌ರವರ ಮಗ **ಮಾಧವ ರಾವ್** ಹಾಗೂ ಶ್ರೀಮತಿ ಮತ್ತು ಶ್ರೀ ಯು. ಅಣ್ಣಾಜಿ ರಾವ್ ಮಂಗಳೂರು ಇವರ ಪುತ್ರಿ **ಶಿಲ್ಪ** ಇವರ ವಿವಾಹವು ತಾ.13-6-2012ರಂದು ಉಡುಪಿ ಒಳಕಾಡಿನ ದೈವಜ್ಞ ಮಂದಿರದಲ್ಲಿ ನೆರವೇರಿತು.

## ವೈವಾಹಿಕ ರಜತೋತ್ಸವ ಆಚರಣೆ

ಪಡುಬಿದ್ರಿ ಶ್ರೀ ಕೆ.ಶಿವಶಂಕರ ಮತ್ತು ಶ್ರೀಮತಿ ಸೀತಾರತ್ನ ಇವರು ತಮ್ಮ ವೈವಾಹಿಕ ಜೀವನದ 25 ವರ್ಷಗಳನ್ನು ಪೂರೈಸಿದ ಪ್ರಯುಕ್ತ ತಾ.12-4-2012ರಂದು ಮೈಸೂರಿನ ತಮ್ಮ ಸ್ವಗೃಹ 'ಅಭ್ಯುದಯ' ಕಲ್ಯಾಣ ಗಿರಿನಗರ್‌ನಲ್ಲಿ ಗಣಹೋಮ, ಸತ್ಯನಾರಾಯಣ ಪೂಜೆಗಳೊಂದಿಗೆ ಬಂದು ಬಾಂಧವರೊಂದಿಗೆ ನೆರವೇರಿಸಿದರು.

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 19-06-2012 | ಅಮಾವಾಸ್ಯೆ |
| 30-06-2012 | ಏಕಾದಶೀ |
| 3-07-2012 | ಗುರು ಪೂರ್ಣಿಮಾ |
| 06-07-2012 | ಸಂಕಷ್ಟಹರ ಚೌತಿ |
| 14-07-2012 | ಏಕಾದಶೀ |
| 16-07-2012 | ಕರ್ಕಾಟಕ ಸಂಕ್ರಮಣ |

## ವಿಳಾಸ ಬದಲಾವಣೆ

## ಸೀಮಂತೋನ್ನಯನ

ಕೊಪ್ಪ-ಪಡುಬಿದ್ರಿ ಶ್ರೀ ಹಿರಿಯಣ್ಣ ಹಾಗೂ ಶ್ರೀಮತಿ ಭಾರತಿ ಶಾಸ್ತ್ರಿಯವರ ಮಗಳು ಕೊಪ್ಪ ಸೀತೂರಿನ ಕಿರಣಕುಮಾರನ ಧರ್ಮಪತ್ನಿ ಶ್ರೀಮತಿ ಸೌಂದರ್ಯ ಇವರ ಸಿಮಂತೋನ್ನಯನ ಕಾರ್ಯಕ್ರಮವು ಕೊಪ್ಪ ಸೀತೂರಿನಲ್ಲಿ ತಾ.28-03-2012ರಂದು ನೆರವೇರಿತು.

## ಶುಭ ಜನನ

ಕುಂಜಾರುಗಿರಿ ಶ್ರೀ ಕೆ. ಹರಿನಾರಾಯಣ ರಾವ್ ಮತ್ತು ಶ್ರೀಮತಿ ಪ್ರೇಮಾ ಇವರ ಪುತ್ರಿ ಪೂಜಿತ ನಾಗೇಶ ಶ್ಯಾನುಭೋಗ್ (ಕೊಳ್ಳೆಗಾಲ ಶ್ರೀ ಕೆ.ಪಾಂಡುರಂಗ ಶ್ಯಾನುಭಾಗ್ ಮತ್ತು ಶ್ರೀಮತಿ ಶೋಭಾ ಶ್ಯಾನುಭಾಗ್ ಇವರ ಪುತ್ರ) ಇವರಿಗೆ ತಾ.13-3-2012ರಂದು ಅನೀಶ ಎಂಬ ಗಂಡು ಶಿಶುವಿನ ಜನನ.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಕ್ಯಾನ್ಸರ್ ಎಂದರೇನು? ಈ ಖಾಯಿಲೆ ಹೇಗೆ ಬರುತ್ತದೆ ? ಇದರ ಚಿಕಿತ್ಸೆ ಹೇಗೆ ?**

ಡಾ| ವೈ. ಸುದರ್ಶನ ರಾವ್

**ಉತ್ತರ:** ತಂದೆಯ ದೇಹದಿಂದ ವೀರ್ಯಾಣು, ತಾಯಿಯ ದೇಹದಿಂದ ಬಂದ ಅಂಡಾಣುಗಳು ಸೇರಿ ತಾಯಿಯ ಗರ್ಭದಲ್ಲಿ ಭ್ರೂಣ ಉತ್ಪತ್ತಿಯಾಗುವಾಗ ಭ್ರೂಣದಲ್ಲಿರುವುದು ಕೇವಲ ಒಂದೇ ಒಂದು ಜೀವಕೋಶ. ಈ ಜೀವಕೋಶವು ವಿಭಜನೆಯಾಗಿ ತನ್ನಂತದ್ದೇ ಇನ್ನೊಂದು ಜೀವಕೋಶಕ್ಕೆ ಜನ್ಮಕೊಡುತ್ತದೆ. ಹೀಗೆ ಒಂದೇ ಇದ್ದ ಜೀವಕೋಶ ಎರಡಾಗಿ, ಎರಡಾದದ್ದು ನಾಲ್ಕಾಗಿ ನಾಲ್ಕಿದ್ದದ್ದು ಹೀಗೆ ವಿಭಜನೆಯ ಮೂಲಕ ತಾಯಿಯ ಗರ್ಭದಲ್ಲಿ ಒಂದು ಮುದ್ದೆಯಷ್ಟು ರಾಶಿ ಜೀವಕೋಶಗಳು ತಯಾರಾಗುತ್ತವೆ. ಈ ಜೀವಕೊಶಗಳಲ್ಲಿ ಕೆಲವು ಜೀವಕೋಶಗಳು ಮೆದುಳಾಗಿಯೂ ಇನ್ನು ಕೆಲವು ಚರ್ಮವಾಗಿಯೂ ಇನ್ನು ಕೆಲವು ಜೀವಕೋಶಗಳು ಎಲುಬಾಗಿಯೂ ಹೀಗೆ ಎಲ್ಲಾ ಜೀವಕೋಶಗಳು ಬೇರೆ ಬೇರೆ ಅಂಗಾಂಶಗಳಾಗಿ ಮಾರ್ಪಾಡು ಹೊಂದುತ್ತವೆ. ಹೀಗೆ ಒಂದು ಜೀವಕೋಶವಾಗಿ ಆರಂಭವಾದ ಭ್ರೂಣವು ತನ್ನ ಜೀವಕೋಶಗಳು ಪದೇ ಪದೇ ವಿಭಜನೆಗೊಳ್ಳುವುದರ ಮೂಲಕ ಮಿಲಿಯಗಟ್ಟಲೆ ಜೀವಕೋಶಗಳಿರುವ ಜೀವಿಯಾಗಿ ಬೆಳೆಯುತ್ತದೆ. ಮುಂದೆ ಹುಟ್ಟಿದ ಮಗು ಕೂಡ ನಂತರ ಗಾತ್ರದಲ್ಲಿ ದೊಡ್ಡದಾಗಿ ಬೆಳೆಯುವುದು ಆಯಾ ಅಂಗದಲ್ಲಿರುವ ಜೀವಕೋಶಗಳು ವಿಭಜನೆಯ ಮೂಲಕ ತಮ್ಮ ಸಂಖ್ಯೆಯನ್ನು ವೃದ್ದಿಸಿಕೊಳ್ಳುವ ಮುಖಾಂತರವೇ. ಅಷ್ಟುಮಾತ್ರವಲ್ಲದೇ ನಶಿಸಿಹೋದ (ಗಾಯ,ಸೋಂಕು ಹಾಗೂ ಸವೆತಗಳಿಂದಾಗಿ) ಅಂಗಾಂಶಗಳು ಕೂಡ ಭರ್ತಿಯಾಗುವುದು ಕೂಡ ಈ ವಿಭಜನೆಯ ಮೂಲಕವೇ. ಆಶ್ಚರ್ಯವೆಂದರೆ ಜೀವಕೋಶಗಳು ವಿಭಜನೆಯ ಮೂಲಕ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವುದು ಅದರ ಉದ್ದೇಶ ಈಡೇರಿದ ತಕ್ಷಣ ನಿಲ್ಲುತ್ತದೆ ಹಾಗೂ ಅಗತ್ಯ ಬಿದ್ದಾಗ ಪುನಃ ಆರಂಭವಾಗುತ್ತದೆ. ಉದಾ: ಗಾಯವಾದಾಗ ಜೀವಕೋಶಗಳು ತುಂಬಿ ಗಾಯ ವಾಸಿಯಾಗುತ್ತದೆ ಹಾಗೂ ಗಾಯ ವಾಸಿಯಾದ ಮೇಲೆ ಅಲ್ಲಿ ಹೊಸ ಜೀವಕೋಶಗಳು ಹುಟ್ಟುವುದಿಲ್ಲ.

ಒಂದು ವೇಳೆ ದೇಹದ ಬೆಳವಣಿಗಾಗಿ ಮತ್ತು ಕಳೆದುಕೊಂಡ (ಸವೆದುಹೋದ) ದೇಹದ ಅಂಗಾಂಶಗಳನ್ನು ಭರ್ತಿಮಾಡಲು ಮಾತ್ರ ವಿಭಜಿಸಿ ಸಂಖ್ಯೆಯನ್ನು ವೃದ್ಧಿಸಿಕೊಳ್ಳಬೇಕಾಗಿದ್ದ ಜೀವಕೋಶಗಳು ಅಂಕೆ ಮೀರಿ ತಮ್ಮಷ್ಟಕ್ಕೆ ತಾವೆ ವಿಭಜಿಸಿಕೊಳ್ಳುತ್ತಾ, ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತಾ ಹೋದರೆ ಆಗ ಒಂದು ಆಕಾರವಿಲ್ಲದ ಜೀವಕೋಶಗಳ ರಾಶಿಯೊಂದು ತಯಾರಾಗುತ್ತದೆ. ಇದನ್ನು ಗಡ್ಡೆ ಎಂದು ಕರೆಯುತ್ತೇವೆ. ಈ ಗಡ್ಡೆ ಹುಟ್ಟಲು ಕಾರಣವಾದ ಜೀವಕೋಶಗಳ ವಿಭಜನೆಗೆ ಯಾವುದೇ ಕಾರಣವಿರುವುದಿಲ್ಲ. (ಮಾತ್ರವಲ್ಲ ಇದು ಬೇಡವಾಗಿತ್ತೂ ಕೂಡ), ಗಡ್ಡೆ ಬೆಳೆದಿರುವ ಅಂಗದ ಆಕಾರಕ್ಕೂ, ಈ ಗಡ್ಡೆಯ ಆಕಾರಕ್ಕೂ ಯಾವುದೇ ಹೋಲಿಕೆ ಇರುವುದಿಲ್ಲ, ಈ ಗಡ್ಡೆಗೆ ಯಾವುದೇ ಕೆಲಸ ಇಲ್ಲ, ಎಲ್ಲಕ್ಕೂ ಮಿಗಿಲಾಗಿ ಒಮ್ಮೆ ಆರಂಭವಾದ ಈ ಗಡ್ಡೆಯ ಬೆಳವಣಿಗೆ ನಿಲ್ಲುವುದೇ ಇಲ್ಲ! ಇದನ್ನು ಕ್ಯಾನ್ಸರ್ ಎಂದು ಕರೆಯುತ್ತೇವೆ.

ಕ್ಯಾನ್ಸರ್ ಗಡ್ಡೆಯು ನಮ್ಮ ದೇಹದ ಯಾವ ಅಂಗದಲ್ಲಿ ಕೂಡಾ ಕಾಣಿಸಿಕೊಳ್ಳಬಹುದು. ಸುಮಾರು ನೂರಕ್ಕೂ ಹೆಚ್ಚು ನಮೂನೆಯ ಕ್ಯಾನ್ಸರ್ ಗಡ್ಡೆಗಳಿವೆ. ಈ ಖಾಯಿಲೆಯು ಎಲ್ಲ ವಯಸ್ಸಿನವರನ್ನೂ ಭಾಧಿಸಬಹುದಾದರೂ ಹೆಚ್ಚಾಗಿ ವಯಸ್ಸಾದವರನ್ನು ಕಾಡುತ್ತದೆ. ಹಾಗಿದ್ದರೂ ಕೆಲವೊಮ್ಮೆ ಮಕ್ಕಳಲ್ಲಿಯೂ, ಇನ್ನೂ ಕೆಲವೊಮ್ಮೆ ಭ್ರೂಣಾವಸ್ಥೆಯಲ್ಲಿಯೇ ಈ ಖಾಯಿಲೆ ಬರುವುದುಂಟು.

ನಮ್ಮ ಜೀವಕೋಶದಲ್ಲಿರುವ ಜೀನ್ (     ) ಎಂಬ ಭಾಗವು ಜೀವಕೋಶಗಳ ವಿಭಜನೆಯಕಾರ್ಯವನ್ನು ನಿರ್ದೇಶಿಸುತ್ತದೆ. ಈ ಜೀನ್ ನ ಸ್ವರೂಪದಲ್ಲಾದ ಬದಲಾವಣೆ ಅದರ ಕಾರ್ಯಶೈಲಿಯನ್ನು ಬದಲಾಯಿಸಿ ಕ್ಯಾನ್ಸರ್ ಗೆ ದಾರಿ ಮಾಡಿ ಕೊಡುತ್ತದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ಕೆಲವು ವಸ್ತುಗಳು ಜೀನ್ ನ ಸ್ವರೂಪದಲ್ಲಿ ಈ ಬದಲಾವಣೆಯನ್ನು ತರಬಲ್ಲವು. ಈ ವಸ್ತುಗಳಿಗೆ ಕ್ಯಾನ್ಸರ್ ಕಾರಕ (          )ಗಳೆಂದು ಕರೆಯುತ್ತೇವೆ. ಈ ವಸ್ತುಗಳು ನಾವು ಸೇವಿಸುವ ಆಹಾರ, ಉಸಿರಾಡುವ ಗಾಳಿ ಹಾಗು ಈ ವಸ್ತುಗಳಿಂದ ಕಲುಷಿತಗೊಂಡ ವಾತಾವರಣಕ್ಕೆ ಮೈಒಡ್ಡಿಕೊಳ್ಳುವ ಮೂಲಕ ನಮ್ಮ ದೇಹವನ್ನು ಪ್ರವೇಶಿಸಿ ನಿಧಾನವಾಗಿ ತಮ್ಮ ಪರಿಣಾಮ ಬೀರುತ್ತವೆ. ಕ್ಯಾನ್ಸರ್ ಕಾರಕ ವಸ್ತುಗಳ ಸಂಪರ್ಕ ಸುಮಾರು ವರ್ಷಗಳ ಕಾಲ ಸತತವಾಗಿ ಇದ್ದರೆ ಮಾತ್ರ ಕ್ಯಾನ್ಸರ್ ಬರುವ ಸಾಧ್ಯತೆ ಇರುತ್ತದೆ. ತಂಬಾಕು, ಆಲ್ಕೋಹಾಲ್,ಆರ್ಸೆನಿಕ್, ಕ್ಷ-ಕಿರಣಗಳು, ವಿಕಿರಣ, ಸೂರ್ಯನ ಬೆಳಕಿನಲ್ಲಿರುವ ಅತಿನೇರಳೆ ಕಿರಣಗಳು, ಆಹಾರವನ್ನು ಸಂಸ್ಕರಿಸಲು ಬಳಸುವ ಕೆಲವು ರಾಸಾಯನಿಕಗಳು ಹಾಗೂ ಕೆಲವು ಔಷಧಿಗಳನ್ನು ಕ್ಯಾನ್ಸರ್ ಕಾರಕಗಳಿಗೆ ಉದಾಹರಣೆಯಾಗಿ ಹೆಸರಿಸಬಹುದು

ಕೆಲವು ವೈರಸ್ ಗಳು ನಮ್ಮ ದೇಹವನ್ನು ಪ್ರವೇಶಿಸಿ ಯಾವುದೇ ಚಿಹ್ನೆಗಳನ್ನೂ ತೋರದೆ ತೆಪ್ಪಗೆ ಇದ್ದು ಸುಮಾರು ವರ್ಷಗಳ ನಂತರ ತಾವು ವಾಸವಾಗಿದ್ದ ಅಂಗದಲ್ಲಿ ಕ್ಯಾನ್ಸರ್ ಬರುವಂತೆ ಮಾಡುತ್ತವೆ. ಕೆಲವು ಕ್ಯಾನ್ಸರ್ ಗಡ್ಡೆಗಳು ಅನುವಂಶಿಕವಾಗಿ ಬರುತ್ತದೆ. ಇದಕ್ಕೆ ಕ್ಯಾನ್ಸರ್‌ಗೆ ಕಾರಣವಾದ ಜೀನ್ ನ್ನು ಅವರು ಹೆತ್ತವರಿಂದ ಅನುವಂಶಿಕವಾಗಿ ಪಡೆದಿರುವುದೇ ಕಾರಣ. ಇನ್ನು ಕೆಲವು ಕ್ಯಾನ್ಸರ್ ಅಲ್ಲದ ಕಾಯಿಲೆಗಳನ್ನು ಸರಿಯಾದ ಸಮಯದಲ್ಲಿ ಗುಣಪಡಿಸಿಕೊಳ್ಳದಿದ್ದರೆ ಕಾಲಕ್ರಮೇಣ ಆ ಖಾಯಿಲೆಗಳು ಕ್ಯಾನ್ಸರ್ ಖಾಯಿಲೆಯಾಗಿ ಬದಲಾವಣೆಯಾಗುವುದುಂಟು. ಆದರೆ ಹೆಚ್ಚಿನ ಕ್ಯಾನ್ಸರ್ ಕೇಸುಗಳಲ್ಲಿ ಇಂತದೇ ಕಾರಣಕ್ಕೆ ಈ ಖಾಯಿಲೆ ಬಂದಿದೆ ಎಂದು ನಿಖರವಾಗಿ ಹೇಳಲಿಕ್ಕೆ ಆಗುವುದಿಲ್ಲ.

ದೇಹದ ಯಾವುದೆ ಭಾಗದಲ್ಲಿ ಪತ್ತೆಯಾದ ಗಡ್ಡೆ ಕ್ಯಾನ್ಸರ್ ಆಗಿರಬಹುದು! ನಾವು ತಿನ್ನುವ ಆಹಾರದ ದೊಡ್ಡ ಪಾಲನ್ನು ಈ ಕ್ಯಾನ್ಸರ್ ಗಡ್ಡೆಯೇ ಕಬಳಿಸುವುದರಿಂದ ದೇಹದ ತೂಕ ಕಡಿಮೆಯಾಗುವುದು ಹಾಗೂ ಹಸಿವೆ ಕಡಿಮೆಯಾಗುವುದು ಇವು ಕ್ಯಾನ್ಸರ್ ಖಾಯಿಲೆಯ ಇನ್ನೆರಡು ಪ್ರಮುಖ ಚಿಹ್ನೆಗಳು. ಇನ್ನು ಕ್ಯಾನ್ಸರ್ ಗಡ್ಡೆ ಬೆಳೆದಿರುವ ಅಂಗವನ್ನು ಹೊಂದಿಕೊಂಡು ಬೇರೆ ಚಿಹ್ನೆಗಳು ಇರುತ್ತವೆ. ಉದಾ: ಶ್ವಾಸಕೋಶದ ಕ್ಯಾನ್ಸರ್ ನಲ್ಲಿ ಕೆಮ್ಮು ಹಾಗೂ ಕಫದಲ್ಲಿ ರಕ್ತಹೋಗುವುದು, ಜಠರದಲ್ಲಿ ಗಡ್ಡೆ ಬೆಳೆದರೆ ಹೊಟ್ಟೆ ನೋವು ಮತ್ತು ರಕ್ತವಾಂತಿಯಾಗುವುದು ಇತ್ಯಾದಿ. ಕುತ್ತಿಗೆ , ಕಂಕುಳ ಹಾಗೂ ತೊಡೆ ಸಂಧಿಯಲ್ಲಿ ದುಗ್ಧಗ್ರಂಥಿಗಳ ಊತ ಇನ್ನೊಂದು ಪ್ರಮುಖ ಚಿಹ್ನೆ.

ದೇಹದ ಒಂದು ಭಾಗದಲ್ಲಿ ಆರಂಭವಾದ ಕ್ಯಾನ್ಸರ್ ಗಡ್ಡೆಯ ತುಣುಕುಗಳು ರಕ್ತನಾಳವನ್ನು ಪ್ರವೇಶಿಸಿ ರಕ್ತದೊಂದಿಗೆ ದೇಹದ ಇನ್ನೊಂದು ಭಾಗಕ್ಕೆ ಹೋಗಿ ಅಲ್ಲಿ ಈ ತುಣುಕುಗಳು ದೊಡ್ಡ ಗಡ್ಡೆಯಾಗಿ ಬೆಳೆಯಬಲ್ಲವು. ಇದನ್ನು ಮೆಟಾಸ್ಟಾಸಿಸ್ ಎಂದು ಕರೆಯುತ್ತೇವೆ. ಕ್ಯಾನ್ಸರ್ ಖಾಯಿಲೆಯಲ್ಲಿ ಮೆಟಾಸ್ಟಾಸಿಸ್ ಇರುವುದು ಒಳ್ಳೆಯ ಸೂಚನೆಯಲ್ಲ.

ಯಾವುದೇ ಕ್ಯಾನ್ಸರ್ ಗಡ್ಡೆಯನ್ನು ಶಸ್ತ್ರಚಿಕಿತ್ಸೆಯ ಮುಖಾಂತರ ಕತ್ತರಿಸಿ ತೆಗೆಯುವುದು ಅತ್ಯುತ್ತಮ ಚಿಕಿತ್ಸೆ. ಒಂದು ವೇಳೆ ಶಸ್ತ್ರಚಿಕಿತ್ಸೆ ಮುಖಾಂತರ ಈ ಗಡ್ಡೆಯನ್ನು ಸಂಪೂರ್ಣ ತೆಗೆಯಲು ಆಗದಿದ್ದರೆ, ಹಲವು ಔಷಧಿಗಳು ಈ ಕಾಯಿಲೆಯ ಚಿಕಿತ್ಸೆಗಾಗಿ ಲಭ್ಯವಿವೆ (ಕೀಮೋತೆರಪಿ). ಇದೇ ರೀತಿ ಕೆಲವು ವಿಕಿರಣಗಳನ್ನು ಕೂಡಾ ಈ ಖಾಯಿಲೆಯ ಚಿಕಿತ್ಸೆಯಲ್ಲಿ ಬಳಸುತ್ತಾರೆ (ರೇಡಿಯೋತೆರಪಿ). ದೇಹವನ್ನೇ ಈ ಕಾಯಿಲೆಯ ವಿರುದ್ಧ ಹೋರಾಡುವಂತೆ ಪ್ರಚೋದಿಸುವುದು ಇಮ್ಯುನೋತೆರಪಿ. ಹಾಗೆಯೇ ಕ್ಯಾನ್ಸರ್ ಬರಲು ಕಾರಣವಾದ ಜೀನನ್ನೇ ಬದಲಾಯಿಸುವುದು ಜೀನ್ ತೆರಪಿ. ಇವೆಲ್ಲವುಗಳಲ್ಲಿ ಇಮ್ಯುನೋತೆರಪಿ ಹಾಗೂ ಜೀನ್ ತೆರಪಿಗಳು ಇನ್ನೂ ಪ್ರಯೋಗದ ಹಂತದಲ್ಲಿವೆ. ಕೀಮೊತೆರಪಿ ಹಾಗು ರೇಡಿಯೋತೆರಪಿಗಳನ್ನು ಶಸ್ತ್ರಚಿಕಿತ್ಸೆಯ ನಂತರವೂ ದೇಹದಲ್ಲಿ ಉಳಿದಿರಬಹುದಾದ ಕ್ಯಾನ್ಸರ್ ಕಣಗಳನ್ನು ನಾಶಮಾಡಲೂ ಬಳಸುತ್ತಾರೆ. ಕೆಲವು ಜಾತಿಯ ಕ್ಯಾನ್ಸರ್ ಗೆ ಹಾಗೂ ಆರಂಭಿಕ ಹಂತದಲ್ಲಿರುವ ವೈದ್ಯರೇ ಸೂಚಿಸಬೇಕಾದ ಕೆಲವೇ ಕೆಲವು ಕೇಸುಗಳಿಗೆ ಶಸ್ತ್ರಚಿಕಿತ್ಸೆಯ ಬದಲು ಈ ಎರಡು ಚಿಕಿತ್ಸೆಗಳನ್ನು ಬಳಸುವುದಿದೆ.

ಕ್ಯಾನ್ಸರ್ ಒಂದು ಕೆಟ್ಟ ಖಾಯಿಲೆ ನಿಜ. ಆದರೂ ವಿನಾಕಾರಣ ಕಾಲಹರಣ ಮಾಡದೆ ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಆದಷ್ಟು ಬೇಗನೆ ಸೂಕ್ತಚಿಕಿತ್ಸೆ ಮಾಡುವುದರಿಂದ ಈ ಕಾಯಿಲೆಯನ್ನು ಕೂಡಾ ಗುಣಪಡಿಸಿಕೊಳ್ಳುವ ಸಾಧ್ಯತೆಗಳು ಖಂಡಿತಾ ಇದೆ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

## ಬೇಕಾಗಿದ್ದಾರೆ

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಶಾರದಾ ನಗರ ಕುಂಜಿಬೆಟ್ಟು ಉಡುಪಿ ಇಲ್ಲಿ ಕೆಲಸ ಮಾಡುವರೇ ಅಸಿಸ್ಟೆಂಟ ಮೇನೆಜರ್ ಬೇಕಾಗಿದ್ದಾರೆ. ಆಕರ್ಷಕ ವೇತನ ಮತ್ತು ವಸತಿ ಗೃಹ ಸೌಕರ್ಯ ಇರುತ್ತದೆ. ಆಸಕ್ತಿ ಉಳ್ಳವರು ಈ ಬಗ್ಗೆ ಕಾರ್ಯದರ್ಶಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ತಮ್ಮ ಅರ್ಜಿಯನ್ನು ಕಳುಹಿಸಬೇಕಾಗಿ ವಿನಂತಿ.

-ಆಡಳಿತ ಮಂಡಳಿ.

## ರತ್ನಾ ಬ್ಯಾ ಸ್ಮಾರಕ ಸಾಲ ವಿದ್ಯಾರ್ಥಿ ವೇತನ : ರೂ.4,00,000/- ದೇಣಿಗೆ

ಡಾ। ದಯಾನಂದ ಎಸ್.ರಾವ್ ಎಜ್ಯುಕೇಶನ ಟ್ರಸ್ಟ್,ಬೆಂಗಳೂರು ಇವರು ''ರತ್ನಾ ಬ್ಯಾ ಸ್ಮಾರಕ ಸಾಲ ವಿದ್ಯಾರ್ಥಿ ವೇತನ''ಕ್ಕಾಗಿ ರೂ.4,00,000/- ನಗದು ನೀಡಿದ್ದಾರೆ. ಇವರು ಕಳೆದ 6 ವರ್ಷಗಳಲ್ಲಿ ಒಟ್ಟು ರೂ.19,00,000/- ಧನಸಹಾಯವನ್ನು ಒದಗಿಸಿದ್ದಾರೆ. ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ಕಾಲೇಜುಗಳಲ್ಲಿ ಸೇರಬಯಸುವ ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ಉತ್ತಮ ಪ್ರಗತಿ ಸಾಧನೆ ಆಧಾರದ ಮೇಲೆ ಪ್ರೊಫೆಷನಲ್ ಕೋರ್ಸಿನ ಇಡೀ ಅವಧಿಯಲ್ಲಿ ಈ ಸಾಲ ವಿದ್ಯಾರ್ಥಿ ವೇತನ ಮುಂದುವರೆಯುತ್ತದೆ.

ವಿಶ್ವದ ಒಬ್ಬೊಬ್ಬ ವ್ಯಕ್ತಿಯ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ವಿದ್ಯಾರ್ಜನೆಯೇ ಸೋಪಾನ ಎನ್ನುವ ಡಾ। ದಯಾನಂದ ಎಸ್.ರಾವ್ ತಮ್ಮ ಬದುಕಿನ ಹೋರಾಟದಲ್ಲಿ ತನಗೆ ಭೀಮ ಬಲವಾಗಿ ಜತೆ ನೀಡಿದ ವಿದ್ಯೆಯನ್ನು ತಾನು ಏರಿಬಂದ ಏಣಿಯನ್ನು ಎಂದೂ ಮರೆತವರಲ್ಲ.

ಯಾರಿಗಾದರೂ ಕೊಡಲು ಶಕ್ತನಾದರೆ ತನ್ನ ಮೊದಲ ಆದ್ಯತೆ ವಿದ್ಯಾರ್ಜನೆಗೆ ಸಹಾಯ ಮಾಡುವುದು ಎಂಬ ತತ್ವಕ್ಕೆ ಬದ್ಧವಾದ ಅವರು ಎಜ್ಯುಕೇಶನ್ ಟ್ರಸ್ಟ್ ಸ್ಥಾಪಿಸಿದ್ದಾರೆ. ಅರ್ಹ ವಿದ್ಯಾರ್ಥಿಗಳಿಗೆ ಸಾಲ ರೂಪದಲ್ಲಿ ವಿದ್ಯಾರ್ಥಿ ವೇತನ ನೀಡುವ ಉದ್ದೇಶದಿಂದ ನಮ್ಮ ಸಮಾಜದ ಸಾಮಾಜಿಕ ಸಂಘಟನೆಗಳಿಗೆ ಸಾಲ ನಿಧಿಯನ್ನು ಮಂಜೂರು ಮಾಡುತ್ತಾರೆ. ಅದಕ್ಕೆ ಅವರ ಕಟ್ಟುನಿಟ್ಟಿನ ಶರತ್ತುಗಳಿವೆ.

ಶ್ರೀಮತಿ ಮೋಹಿನಿ ದಯಾನಂದ ಎಸ್. ರಾವ್, ಮೆನೆಜಿಂಗ ಟ್ರಸ್ಟಿ, ಡಾ। ದಯಾನಂದ ಎಸ್.ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು ಅವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ತುಂಬುಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತದೆ.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCM/CORP/0425), NCDEX -00132: (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013 Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



**Celebrations**
Conference & Party Hall (Air Conditioned)

HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.06-07-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-06-2012 ಜ್ಯೇಷ್ಠ ಶುದ್ಧ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.03-07-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

ಕೋಡಿಂಬಾಡಿ-ಪುತ್ತೂರು ತಾಲೂಕು, ದ.ಕ. ದೂರವಾಣಿ: 08251-261010, ಮೊ. : 9901247080

### ಸಮಾಜ ಬಾಂಧವರಲ್ಲಿ ವಿನಂತಿ

ಆತ್ಮೀಯ ಭಗವದ್ಭಕ್ತರೇ,

ಪುತ್ತೂರು ತಾಲೂಕಿನ ಕೋಡಿಂಬಾಡಿ ಸಮೀಪ ಇರುವ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನವನ್ನು ಸುಮಾರು ನೂರು ವರ್ಷಗಳ ಹಿಂದೆ 31-03-1915 ರಲ್ಲಿ ಸಾಮಾನ್ಯ ರೀತಿಯಲ್ಲಿ ಮಠದಬೆಟ್ಟು ದಿ। ಸುಬ್ರಾಯರು ಕಟ್ಟಿಸಿದ್ದು ತಂತ್ರಿಗಳಾದ ದಿ। ಕುರಯ ನಾರಾಯಣಾಚಾರ್ಯರ ನೇತೃತ್ವದಲ್ಲಿ ಬ್ರಹ್ಮಕಲಶ ನೆರವೇರಿಸಿದ್ದರು.

ಶ್ರೀ ದೇವಳದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನವರಾತ್ರಿ ಉತ್ಸವ, ಚಂಡಿಕಾಹೋಮ, ಅನ್ನಸಂತರ್ಪಣೆ, ವಾರ್ಷಿಕ ಉತ್ಸವ, ವಿನಾಯಕ ಚತುರ್ಥಿ, ಋಗುಪಾಕರ್ಮ, ದೀಪಾವಳಿ, ಧನುಪೂಜೆ, ಪತ್ತನಾಜೆ ಹಾಗೂ ನಿತ್ಯಪೂಜೆ ಹೀಗೆ ಹಲವು ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿದೆ. ಶ್ರೀ ಕ್ಷೇತ್ರಕ್ಕೆ ಬರುತ್ತಿರುವ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಭಕ್ತರ ಮನಸ್ಸಿನ ಸಂಕಲ್ಪವನ್ನು ಶ್ರೀ ದೇವಿಯು ಈಡೇರಿಸುತ್ತಿದ್ದಾಳೆ.

ಪ್ರಕೃತ ದೇವಾಲಯದ ಗೋಡೆ, ಮಾಡುಗಳೆಲ್ಲ ಶಿಥಿಲಗೊಂಡಿರುವುದರಿಂದಲೂ ಹಾಗೂ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದರಿಂದ ದೇವಾಲಯದ ಸಮಗ್ರ ಜೀರ್ಣೋದ್ಧಾರಗೊಳಿಸಬೇಕೆಂಬ ದೃಷ್ಟಿಯಿಂದ ಜೀರ್ಣೋದ್ಧಾರ ಸಮಿತಿಯೊಂದನ್ನು ರಚಿಸಲಾಗುವುದು.

ಈ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಯಂಗಳ ಪರಿಪೂರ್ಣ ಅನುಗ್ರಹ ಪಡೆದು ಧಾರ್ಮಿಕ ವಿಧಿ ವಿಧಾನವನ್ನು ಪಾವಂಜೆ ಬ್ರಹ್ಮಶ್ರೀ ವೇದಮೂರ್ತಿ ತಂತ್ರಿಗಳಾದ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಸಲಾಗುವುದು.

ಖ್ಯಾತ ವಾಸ್ತು ತಜ್ಞರಾದ ಶ್ರೀ ಮುನಿಯಂಗಳ ಕೃಷ್ಣ ಪ್ರಸಾದ್‌ರವರ ಮಾರ್ಗದರ್ಶನ ದಲ್ಲಿ ದೇವಾಲಯದ ಕಾಮಗಾರಿಗಳನ್ನು ನಡೆಸಲಾಗುವುದು. ಈ ದೇವಾಲಯಕ್ಕೆ ಯಾವುದೇ ಆದಾಯ ಬರುವ ಮೂಲಗಳಿರುವುದಿಲ್ಲ, ಉದಾರಿಗಳಾದ ಭಕ್ತಾದಿಗಳಿಂದಲೇ ಧನ ಸಂಗ್ರಹಿಸಿ ಕಾರ್ಯ ಪೂರೈಸಬೇಕಾಗಿರುತ್ತದೆ. ಶಿಲಾಮಯ ಗರ್ಭಗುಡಿ, ಗಣಪತಿ ಗುಡಿ, ದೈವಗಳ ಗುಡಿ, ನಾಗನಕಟ್ಟೆ, ಸುಂದರವಾದ ಸಭಾಭವನ ಇತ್ಯಾದಿ ಕಾಮಗಾರಿಗಳಿಗೆ ಸುಮಾರು ಅಂದಾಜು ವೆಚ್ಚ ರೂ.1 ಕೋಟಿ 50 ಲಕ್ಷ ಬೇಕಾಗಬಹುದೆಂದು ಊಹಿಸಲಾಗಿದೆ. ಆದುದರಿಂದ ಸಹೃದಯ ಭಕ್ತ ಜನರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಜೀರ್ಣೋದ್ಧಾರ ಕಾರ್ಯ ಶೀಘ್ರವಾಗಿ, ನಿರ್ವಿಘ್ನವಾಗಿ ನಡೆಯುವರೇ ತಾವು ತನು-ಮನ-ಧನಗಳಿಂದ ಸಹಕಾರ ನೀಡಿ ಈ ಕಾರ್ಯದಲ್ಲಿ ಭಾಗಿಗಳಾಗಿ ಶ್ರೀ ರಾಜರಾಜೇಶ್ವರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

-ಆಡಳಿತ ಮಂಡಳಿ




ಎಮ್. ದೇವಾನಂದ್ ಭಟ್

**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್
ಎಡಪದವು - 574 164
ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು